


ಆಶೀಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪ್‌ಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಮಾರ್ಚ್ 2006

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Breaking Personal & Generational Bondages)

# ವೈಯಕ್ತಿಕ

## ಮತ್ತು ತಲೆಮಾರಿನ ಬಂಧನಗಳನ್ನು

# ಮುರಿಯುವುದು

# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | ತಲೆಮಾರಿನ ಬಂಧನವೆಂದರೇನು? | 5 |
| 2. | ಅಪರಾಧ ಮತ್ತು ಪಾಪ | 11 |
| 3. | ಕುಟುಂಬದ ಬಂಧನಗಳಿಗೆ ಪ್ರವೇಶ ಕೊಡುವುದು ಯಾವುದು? | 15 |
| 4. | ವೈಯಕ್ತಿಕ ಮತ್ತು ಕುಟುಂಬದ ಬಂಧನಗಳನ್ನು ಗುರುತಿಸುವುದು | 21 |
| 5. | ಬಂಧನಗಳಿಂದ ಸ್ವತಂತ್ರವಾಗಿರುವುದು ಹೇಗೆ? | 23 |
| | ಮೇಲಿಂದ ಮೇಲೆ ಕೇಳುವ ಪ್ರಶ್ನೆಗಳು | 30 |
| | ಪೂರ್ವಸಿದ್ಧತೆ | 38 |
| | ಪ್ರಾರ್ಥನೆ | 39 |

# ಪೀಠಿಕೆ

ಜನರು ಎದುರಿಸುವ ತೊಂದರೆಗಳಲ್ಲಿ ಕೆಲವು ಪೂರ್ವ ತಲೆಮಾರಿನಿಂದ ಉದ್ಭವಿಸಿದಂಥವುಗಳಾಗಿರಬಹುದು. ಪೂರ್ವ ತಲೆಮಾರಿನವರು ಮಾಡಿದ ಪಾಪ ಮತ್ತು ದುಷ್ಕಾರ್ಯಗಳ ಫಲಗಳಾಗಿವೆ. ಉದಾಹರಣೆಗೆ, ಒಂದು ಕುಟುಂಬದಲ್ಲಿ, ತಾತನು ದಿವಾಳಿತನವನ್ನು ಅನುಭವಿಸಿದರೆ ಅವು ಆತನ ಮಕ್ಕಳಲ್ಲಿ ಒಬ್ಬನ ಮೇಲೆ ಮುಂದುವರೆಯಬಹುದು. ಆ ಮಗನಿಗೆ ಮಕ್ಕಳಾಗಿ ಅವರಲ್ಲಿ ಕೆಲವರು ದಿವಾಳಿತನ ಎದುರಿಸಬಹುದು. ಆದುದರಿಂದ ವಂಶದಿಂದ ವಂಶಕ್ಕೆ ಒಬ್ಬ ಅಥವಾ ಹೆಚ್ಚಿನವರು ಇಂತಹ ತೊಂದರೆಗಳಿಗೆ ಸಿಲುಕಬಹುದು.

ಮತ್ತೊಂದು ಉದಾಹರಣೆಯೆಂದರೆ, ಕುಟುಂಬದಲ್ಲಿ ತಾತನು ಆಳವಾಗಿ ಬೇರೂರಿದ ಕುಡಿತದ ಚಟಕ್ಕೆ ಬಲಿಯಾಗಿದ್ದರೆ, ಅವನ ಮಕ್ಕಳು ಮತ್ತು ಮೂರನೇ ತಲೆಮಾರಿನವರೆಗೂ ಸಹ ಕುಡಿತದ ಚಟಕ್ಕೆ ಬಲಿಯಾಗುತ್ತಾರೆ. ಎಲ್ಲರೂ ಸಹ ಒಂದೇ ಮಾದರಿಯ ಸಮಸ್ಯೆಯಲ್ಲಿ ಬಳಲುತ್ತಿರುತ್ತಾರೆ. ಇದನ್ನು 'ಸಂತತಿ ವೃಕ್ಷ' ವೆಂದು ಕರೆಯಬಹುದು ಅಂದರೆ ಒಬ್ಬನು ಮಾತ್ರವಲ್ಲ ವಂಶದಿಂದ ವಂಶಕ್ಕೆ ಇದೇ ಮಾದರಿ ಉತ್ಪತ್ತಿಮಾಡುತ್ತದೆ. ಇಂತಹ ಪುನರಾವರ್ತಿಸುವ ಸಮಸ್ಯೆಗಳಿಗೆ ಕಾರಣಗಳೇನಾಗಿರಬಹುದು? ಜೀವನ ಶೈಲಿಯ ನಡವಳಿಕೆಗಳು, ಜೀವಿತದ ಅನುಭವಗಳು - ವಿಪತ್ತುಗಳು ಮುಂತಾದವುಗಳಾಗಿರಬಹುದೋ? ಆತ್ಮಿಕ ಕಾರಣಕ್ಕಾಗಿ ಇಂತಹ ವಂಶಪಾರಂಪರ್ಯ ತೊಂದರೆಗಳು ಪುನಾರಾವರ್ತಿಸುತ್ತವೆಯೋ? ಹಾಗಿದ್ದರೆ, ಇಂತಹ ಲಕ್ಷಣಗಳಿಗೆ ಸಾಮಾನ್ಯವಾಗಿ ಸ್ಪಂದಿಸದೇ ಆಳವಾಗಿ ವ್ಯವಹರಿಸಬೇಕು. ಸ್ವರೂಪದಲ್ಲಿ ಆತ್ಮಿಕವಾಗಿರುವ ಮೂಲ ಕಾರಣಗಳೊಂದಿಗೆ ವ್ಯವಹರಿಸಬೇಕು.

## ತಲೆಮಾರಿನ ಬಂಧನಗಳಿಗೆ ಉದಾಹರಣೆಗಳು

ನಾವು ಎದುರಿಸುವ ಅನೇಕ ಸಮಸ್ಯೆಗಳು ಅಥವಾ ತೊಡಕುಗಳು ತಲೆಮಾರಿನ ಬಂಧನಗಳಿಂದ ಬಂದಿರುತ್ತವೆ. ಪಾಪಮಯ ನಡವಳಿಕೆ, ಸುಳ್ಳು ಹೇಳುವ ಜೀವನ ಕ್ರಮ, ಮೋಸ ಮಾಡುವುದು, ಕೋಪ, ದೌರ್ಜನ್ಯ, ಜೂಜಾಡುವುದು, ಕುಡಿಕತನ, ಮಾದಕದ್ರವ್ಯ ಅವಲಂಬನೆ, ವ್ಯಭಿಚಾರ, ಅನೀತಿ, ಮಾರಕ ವ್ಯಕ್ತಿತ್ವ, ನಿಂದೆ, ಆತ್ಮಹತ್ಯೆ ಪ್ರವೃತ್ತಿ ಮುಂತಾದವುಗಳು. ಗುಣವಾಗದ ರೋಗಗಳು, ವಿಚ್ಛೇದನೆ, ಹಣಕಾಸಿನ

ದಿವಾಳಿತನ, ವ್ಯಾಪಾರದಲ್ಲಿ ಸೋಲು, ಬೇರೆ ಕ್ಷೇತ್ರದಲ್ಲಿ ಸೋಲು, ಕುಗ್ಗುವಿಕೆ, ಮಾನಸಿಕ ಭಾವನೆಗಳು ಮುರಿದುಬೀಳುವದು, ವಿಚಾರಹೀನ ಭಯ, ಅಭದ್ರತೆ, ಬಡತನ, ತಳ್ಳಲ್ಪಡುವಿಕೆ, ಆಹಾರಸೇವನೆಯಲ್ಲಿ ಏರುಪೇರು, ನಿರುದ್ಯೋಗ, ವಿವಾಹದ ಮೊದಲೇ ಮಕ್ಕಳ ಜನನ, ದೈಹಿಕ, ಮಾನಸಿಕ ಏರುಪೇರು ಅಥವಾ ದೌರ್ಬಲ್ಯ, ಬಂಜೆತನ, ಅಸಿದ್ಧಿಗರ್ಭಧಾರಣೆ, ಅಪಘಾತಗಳು, ಬೋರಲುಬಿದ್ದಿರುವುದು, ಅಸ್ವಾಭಾವಿಕ ಅಕಾಲಿಕ ಮರಣಗಳು ಇವೆಲ್ಲವೂ ತಲೆಮಾರಿನ ಸಂತತಿಯ ಬಂಧನಗಳಿಂದ ಉಂಟಾಗುತ್ತವೆ.

## ಸಾರ್ವತ್ರಿಕ ಪರಿಹಾರವಲ್ಲ

ಇದರ ಅಧ್ಯಯನ ಮುಂದುವರೆಸುವ ಮೊದಲು ನಾವು ಎದುರಿಸುವ ಎಲ್ಲಾ ತೊಂದರೆಗಳಿಗೆ, ನಾವು ಆ ತಲೆಮಾರುಗಳ ಪ್ರತಿಯೊಂದು ಬಂಧನದೊಂದಿಗೆ ವ್ಯವಹರಿಸುವುದು ಪರಿಹಾರವಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬೇಕು. ವಂಶ ಪಾರಂಪರ್ಯ ಸಂತತಿಯ ಬಂಧನಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಮುರಿದುಹಾಕುವುದು, ನಮ್ಮ ಜೀವಿತದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ತಲೆಮಾರಿನ ಸಂತತಿಯ ಬಂಧನಗಳು ಕೆಲವು ಸಮಸ್ಯೆಗಳಿಗೆ ಕಾರಣವಲ್ಲ. ಉದಾಹರಣೆ ಒಬ್ಬನು ಸಾಕಷ್ಟು ನಿದ್ದೆಮಾಡದೆ ತಲೆನೋವು ಉಂಟಾದರೆ ಅದು ಸಂತತಿಯ ಬಂಧನವಲ್ಲ! ಕೆಲವು ವಿಷಯಗಳನ್ನು ತಲೆಮಾರಿನ ಸಂತತಿಯ ಬಂಧನಗಳೆಂದು ಗುರ್ತಿಸುವಲ್ಲಿ ಜಾಗರೂಕರಾಗಿರಬೇಕು. ಈ ಬಂಧನಗಳೇ ತೊಡಕುಂಟು ಮಾಡುತ್ತವೆಂದು ಅರ್ಥಮಾಡಿಕೊಳ್ಳುವುದಲ್ಲ. ಬದಲಾಗಿ ಬೇರೆ ಅನೇಕ ವಿಷಯಗಳು ಸಹ ತೊಂದರೆಗೆ ಎಡೆಮಾಡಿಕೊಡುತ್ತವೆಂದು ತಿಳಿಯಬೇಕು.

## ಬೇರೆ ಅಂಶಗಳು ನಿರತವಾಗಿವೆ (ಅಡಕವಾಗಿವೆ)

ಕೆಲವು ಪಾಪದ ನಡವಳಿಕೆಗಳು ಒಂದು ಸಂತತಿಯಿಂದ ಮತ್ತೊಂದು ಸಂತತಿಗೆ ಹಾದು ಹೋದರೆ ಅದರಲ್ಲಿ ಇನ್ನೂ ಅನೇಕ ಬೇರೆ ಅಂಶಗಳು ಅಡಕವಾಗಿವೆ. ಆತ್ಮಿಕ ಕಾರಣಗಳಲ್ಲದೆ ವೈಯಕ್ತಿಕವಾದುವುಗಳು, ಮತ್ತು ಅನುವಂಶಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ಅಂಶಗಳಿರಬಹುದು.

ಉದಾಹರಣೆಗೆ ಒಬ್ಬನು 'ಮಾದಕ ದ್ರವ್ಯ ತೆಗೆದುಕೊಳ್ಳುವ' ಚಟಕ್ಕೆ ಬಲಿಯಾಗಿದ್ದರೆ ಅದು ಆತನ ಪೂರ್ವಜರು ಚಟಕ್ಕೆ ಒಳಗಾಗಿದ್ದರು ಎಂಬುದಲ್ಲ.

ಬದಲಾಗಿ ಅದು ಆತನ ತಪ್ಪಾದ ವೈಯಕ್ತಿಕ ಜೀವನ ಶೈಲಿ ಮತ್ತು ದುಷ್ಟ ಪ್ರಭಾವವಾಗಿದೆ.

## ಸತ್ಯವನ್ನು ತಿಳಿದು ಸತ್ಯವನ್ನು ಅನ್ವಯಿಸಬೇಕು

ತಲೆಮಾರಿನ ಬಂಧನಗಳೇನೆಂದು ಅರ್ಥಮಾಡಿಕೊಂಡು ತೊಂದರೆಗಳಿಗೆ ತಲೆಮಾರಿನ ಬಂಧನಗಳು ಮೂಲಕಾರಣವಾದರೆ ಅದರ ಸತ್ಯ ಅನ್ವಯಿಸಿಕೊಳ್ಳಲು ತಿಳಿದಿರಬೇಕಾದದ್ದು ಮುಖ್ಯ. ಇದರಿಂದ ಶಾಶ್ವತ ಪರಿಹಾರವೇನೆಂಬುದನ್ನು ನಾವೆಲ್ಲರೂ ಗುರ್ತಿಸುತ್ತೇವೆ. ಆದರೆ ಮೂಲಕಾರಣದೊಂದಿಗೆ ವ್ಯವಹರಿಸದಿದ್ದರೆ ಇವುಗಳಿಗೆ ಶಾಶ್ವತ ಪರಿಹಾರವಿಲ್ಲ. ಈ ಎರಡನ್ನು ನಮಗೂ ನಾವು ಸೇವೆ ಮಾಡುವವರಿಗೂ ಅನ್ವಯಿಸಿಕೊಳ್ಳಬೇಕು.

**''ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ, ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ''**. (ಎಫೆಸದವರಿಗೆ 6:12).

ನಾವು ಹೋರಾಡುವುದು ''ಶರೀರ ಮತ್ತು ರಕ್ತ''ದೊಡನೆಯಲ್ಲ, ಜನರೊಡನೆಯು ಅಲ್ಲ, ಆದರೆ ದುಷ್ಟತನ, ದುರಾತ್ಮಗಳ ಸೇನೆ, ಅಂಧಕಾರದ ಲೋಕಾಧಿಪತಿಯಾದ ಸೈತಾನನ ಮತ್ತು ಅವನ ಅನುಯಾಯಿಗಳ ಮೇಲೆ ಹೋರಾಡುವವರಾಗಿದ್ದೇವೆ. ಕೆಲವು ಹೋರಾಟಗಳು ಸಹ ಸಂಬಂಧಿಸಿವೆ ಅಂದರೆ ನಾವು ಎದುರಿಸುವ ಕೆಲವು ಸಮಸ್ಯೆಗಳು ಆತ್ಮಿಕ ಕಾರಣ ಹೊಂದಿವೆ.

ದೇವರ ವಾಕ್ಯವು ''ಸೈತಾನನಿಗೆ ಅವಕಾಶ ಕೊಡಬೇಡಿರಿ'' ಎಂದು ಎಚ್ಚರಿಸುತ್ತದೆ (ಎಫೆಸದವರಿಗೆ 4:27) ನಾವು ಆತನಿಗೆ ಯಾವುದೇ ರೀತಿಯಲ್ಲಿ ಅವಕಾಶ ಕೊಡದಂತೆ ಎಚ್ಚರವಾಗಿರಬೇಕು. ನಮ್ಮ ಜೀವಿತಗಳಿಗೆ ಸೈತಾನನು ಯಾವ ರೀತಿ ಪ್ರವೇಶಿಸುತ್ತಾನೆ ಅನ್ನುವುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಅರ್ಥಮಾಡಿಕೊಂಡರೆ ಅವನನ್ನು ಎದುರಿಸಲು ಸಾಧ್ಯ. ಅವನು ಹೇಗೆ ಪ್ರವೇಶಿಸುತ್ತಾನೆಂದು ತಿಳಿಯದಿದ್ದರೆ ಅವನನ್ನು ಓಡಿಸಲು ಆಗದು. ಸಮಸ್ಯೆಯ ಮೂಲದೊಂದಿಗೆ ವ್ಯವಹರಿಸದಿದ್ದರೆ ಸೈತಾನನೇ ಜಯಶಾಲಿಯಾಗುತ್ತಾನೆ. ನಾವು ಮೂಲ ತೊಂದರೆಯೊಂದಿಗೆ ಹೋರಾಡದಿದ್ದರೆ ''ನೆರಳಿನೊಂದಿಗೆ ಹೋರಾಟ'' ಮಾಡಿದಂತಾಗುತ್ತದೆ.

## ಪಾರಿಭಾಷಿಕ ಪದಗಳು ಮತ್ತು ಪರಿಭಾಷಾಶಾಸ್ತ್ರ

ಕ್ರಿಸ್ತೀಯ ಪ್ರಪಂಚದಲ್ಲಿ ''ಕುಟುಂಬ ಶಾಪ'' ಮತ್ತು ತಲೆಮಾರಿನ ಶಾಪ'' ಎಂಬುದು ಉಪಯೋಗಿಸಲ್ಪಟ್ಟಿದೆ, ಈ ಪುಸ್ತಕದಲ್ಲಿ ''ಶಾಪ'' ಎಂಬ ಪದ ಉಪಯೋಗಿಸದೆ ''ಬಂಧನ'' ಎಂಬ ಪದವನ್ನು ಉಪಯೋಗಿಸಿದ್ದೇವೆ. ಯಾಕೆಂದರೆ ಸಮಸ್ಯೆಯ ಸರಿಯಾದ ವ್ಯಾಪಕವಾದ ಗುಣವನ್ನು ಈ ಪದ ನಿಶ್ಚಯಿಸುತ್ತದೆ. ''ಶಾಪ'' ಎನ್ನುವ ಪದ ''ಬಾಯಿಂದ ಹೇಳಿದ ಪ್ರಕಟನೆ''ಯಾಗಿದೆ. ಅಂದರೆ ನಮ್ಮ ಜೀವಿತದೊಳಕ್ಕೆ ನುಡಿಯಲ್ಪಟ್ಟಿದ್ದು. ವೈರಿಯು ಕುಟುಂಬಗಳ ಮೂಲ, ವೈಯುಕ್ತಿಕ ಮೂಲ ಮತ್ತು ಕುಟುಂಬದ ಮೂಲಕ ವ್ಯಕ್ತಿಗಳ ಮೇಲೆ ತಂದಂತಹ ತಲೆಮಾರಿನ ಬಂಧನಗಳ ಕುರಿತು ಇಲ್ಲಿ ವಿವರಿಸುತ್ತೇವೆ.

ಕೆಲವು ಸಂದರ್ಭಗಳಲ್ಲಿ ''ಕುಟುಂಬ ಶಾಪ'' ''ತಲೆಮಾರಿನ ಶಾಪ'' ಮತ್ತು ''ತಲೆಮಾರಿನ ಸಂತತಿಯ ಬಂಧನ'' ಪದಗಳನ್ನು ಅದಲು ಬದಲು ಮಾಡಲಾಗಿದೆ. ಆದಾಗ್ಯೂ, ನಾವು ಉಪಯೋಗಿಸುವ ಪಾರಿಭಾಷಿಕ ಪದಗಳಿಗಿಂತಲೂ ಸತ್ಯವನ್ನು ಅರ್ಥಮಾಡಿಕೊಳ್ಳುವುದು, ಅವುಗಳನ್ನು ನಮ್ಮ ಜೀವಿತಗಳಲ್ಲಿ ಅನ್ವಯಿಸುವುದು ಮುಖ್ಯವಾಗಿದೆ.

ತಲೆಮಾರಿನ ಬಂಧನಗಳನ್ನು ಅರ್ಥಮಾಡಿಕೊಳ್ಳುವುದು ಅದರ ಸತ್ಯವನ್ನು ಅನ್ವಯಿಸಿಕೊಳ್ಳುವುದು ಮತ್ತು ತಲೆಮಾರಿನ ಬಂಧನಗಳು ತೊಂದರೆಗಳಿಗೆ ಮೂಲ ಕಾರಣವಾಗಿದ್ದರೆ, ಅದಕ್ಕೆ ಶಾಶ್ವತ ಪರಿಹಾರ ಏನೆಂಬುದನ್ನು ತಿಳಿಯುವುದು ಮುಖ್ಯವಾಗಿದೆ.

# 1

# ತಲೆಮಾರಿನ ಬಂಧನಗಳೆಂದರೇನು?

**‘‘ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು, ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ, ಭೂಮಿಯಲ್ಲಾಗಲಿ, ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂಬಾರದು, ಪೂಜೆ ಮಾಡಲೂಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವನನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದುದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷ ಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿಯೂ ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಗೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆತೋರಿಸುವವನಾಗಿಯೂ ಇದ್ದೇನೆ’’** (ವಿಮೋಚನ ಕಾಂಡ 20:3-6).

ಕರ್ತನು ಎರಡು ಆಜ್ಞೆಗಳನ್ನು ನೀಡಿದ್ದಾನೆ. ಮೊದಲನೆಯದಾಗಿ ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು ಮತ್ತು ಎರಡನೆಯದಾಗಿ, ಮೂರ್ತಿಗಳ ರೂಪವನ್ನು ಮಾಡಿಕೊಂಡು ಅವುಗಳಿಗೆ ಅಡ್ಡಬೀಳಲೂಬಾರದು, ಪೂಜೆ ಮಾಡಲೂಬಾರದು. ಕರ್ತನು ಇದನ್ನು ಪಾಲಿಸದಿದ್ದರೆ ಮೂರು ನಾಲ್ಕು ತಲೆಗಳವರೆಗೆ ಬರುವ ದೋಷವನ್ನು ಬರಮಾಡುವನೆಂದು ಹೇಳಿದ್ದನ್ನು ನೋಡುತ್ತೇವೆ. ಇಲ್ಲಿ ಯಾವುದಾದರೊಂದು ಸಂತತಿ, ಸುಳ್ಳು ದೇವತೆಗಳಿಗೆ, ಮೂರ್ತಿಗಳಿಗೆ ಅಡ್ಡಬಿದ್ದು ಪೂಜೆ ಸಲ್ಲಿಸಿದರೆ, ಇದು ದೋಷಗಳಿಗೆ ಅವಕಾಶ ಮಾಡಿಕೊಡುತ್ತದೆ. ಆ ದೋಷಗಳು ಅವರ ಜೀವಿತಗಳಲ್ಲೂ ಮುಂದಿನ ಅವರ ಸಂತತಿಗಳಿಗೂ ಮುಂದುವರೆಯುತ್ತವೆ. ನಾವು ಇದನ್ನು ‘‘ತಲೆಮಾರಿನ ಬಂಧನ’’ ಅಥವಾ ‘‘ಸಂತತಿಯ ದೋಷಫಲ’’ ಎಂದು ಕರೆದಿದ್ದೇವೆ.

ಇಲ್ಲಿ ಮೊದಲ ಬಾರಿಗೆ ‘‘ತಲೆಮಾರಿನ ಬಂಧನ’’ ಅಥವಾ ‘‘ಸಂತತಿಯ ದೋಷಗಳು’’ ಎಂಬ ವಿಚಾರ ತಿಳಿಸಲ್ಪಟ್ಟಿತ್ತು. ಇದು ‘‘ದೇವರಿಂದಲೇ ತಿಳಿಸಲ್ಪಟ್ಟಿತ್ತು’’ ಎಂಬುದು ಪ್ರಾಮುಖ್ಯ ವಿಷಯ. ‘‘ತಲೆಮಾರಿನ ದೋಷಗಳು’’ ಭಯದಿಂದ ಕೂಡಿದ ಜನರ ‘‘ಕಲ್ಪನೆ’’ಯಲ್ಲ ಅಥವಾ ಜನರನ್ನು ಭಯಪಡಿಸುವ ಮೂಲಕ ತಮ್ಮ ಕೈಚಳಕ ತೋರಿಸುವ ನಾಯಕರುಗಳ ಪ್ರಯತ್ನವಲ್ಲ. ಕರ್ತನಾದ ದೇವರು ದೋಷಫಲಗಳನ್ನು ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿದ್ದಾನೆ. ಎಂದು ಜನರನ್ನು ತಾನೇ ಎಚ್ಚರಿಸಿದ್ದಾಗಿದೆ.

ಇಂತಹ ಆಲೋಚನೆಗಳು ಇನ್ನೂ ನಾಲ್ಕು ಕಡೆಗಳಲ್ಲಿರುವುದನ್ನು ನಾವು ಗುರ್ತಿಸಬಹುದು. ಇಲ್ಲಿ ನಾವು ಸತ್ಯವೇದದ ಒಂದು ಉದಾಹರಣೆಯಿಂದ ಯಾವುದೇ ಪ್ರತ್ಯೇಕ ದೈವಶಾಸ್ತ್ರ ಅಭಿವೃದ್ಧಿಪಡಿಸುತ್ತಿಲ್ಲ. ಬದಲಾಗಿ ಅವುಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ.

**''ಸಾವಿರಾರು ತಲೆಗಳವರೆಗೂ ದಯೆ ತೋರಿಸುವವನು, ದೋಷಾಪರಾಧಪಾಪಗಳನ್ನು ಕ್ಷಮಿಸುವವನು, ಆದರೂ ಅಪರಾಧಗಳನ್ನು ಶಿಕ್ಷಿಸದೆ ಬಿಡದವನು, ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನು ಎಂಬುದೇ''** (ವಿಮೋಚನಕಾಂಡ 34:7)

**''ಯೆಹೋವನು ದೀರ್ಘಶಾಂತನು, ಬಹು ಪ್ರೀತಿಯುಳ್ಳವನು, ಅಪರಾಧ ಪಾಪಗಳನ್ನು ಕ್ಷಮಿಸುವವನು, ಆದಾಗ್ಯೂ (ಅಪರಾಧಿಗಳನ್ನು) ಶಿಕ್ಷಿಸದೇ ಬಿಡದವನು, ತಂದೆಗಳ ಪಾಪಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನು''** (ಅರಣ್ಯಕಾಂಡ 14:18).

**''ಅವುಗಳಿಗೆ ಅಡ್ಡ ಬೀಳಲೂಬಾರದು, ಪೂಜೆ ಮಾಡಲೂಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದುದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರುನಾಲ್ಕು ತಲೆಗಳವರೆಗೆ ಬರಮಾಡುವವನಾಗಿದ್ದೇನೆ''** (ಧರ್ಮೋಪದೇಶಕಾಂಡ 5:9)

**''ನೀನು ಸಾವಿರಾರು ತಲೆಗಳವರೆಗೆ ದಯೆತೋರಿಸುವವನೂ ತಂದೆಗಳ ದೋಷಫಲವನ್ನು ಅವರ ತರುವಾಯ ಮಕ್ಕಳ ಮಡಿಲಿಗೆ ಹಾಕುವವನೂ ಆಗಿದ್ದೀ, ನೀನು ಮಹಾ ಪರಾಕ್ರಮಿಯಾದ ದೇವರು, ಸೇನಾಧೀಶ್ವರನಾದ ಯೆಹೋವನೆಂಬುದು ನಿನ್ನ ನಾಮಧೇಯ;** (ಯೆರೆಮೀಯ 32:18)

## ವಿಗ್ರಹಾರಾಧನೆ

ವಿಗ್ರಹಾರಾಧನೆ ತಪ್ಪು! ದೇವರು ಮೂರ್ತಿಪೂಜೆ ಮಾಡಬೇಡಿರಿ ಎಂದು ಹೇಳಿದ್ದಾನೆ, ವಿಗ್ರಹ, ಚಿತ್ರ ಅಥವಾ ಬೇರೆ ಯಾವ ಮೂರ್ತಿಯನ್ನು ಪೂಜಿಸಬಾರದು, ಬದಲಾಗಿ ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ, ಜೀವಿಸುವ ಸತ್ಯದೇವರನ್ನೇ ಆರಾಧಿಸಬೇಕು. ಹೀಗೆ ನಾವು ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ಮೂರ್ತಿಗಳ ಮುಂದೆ ಅಡ್ಡ ಬೀಳುವುದು ಅದು ಯೇಸುವಿನ ಚಿತ್ರ, ಸಂತರ ಚಿತ್ರ ಅಥವಾ ಬೇರೆ ಯಾವ ಚಿತ್ರಗಳು ಆಗಬಹುದು. ಅದರ ಮುಂದೆ ಅಡ್ಡ ಬೀಳುವುದು ಏಕೆ ತಪ್ಪು?
- ಯೇಸುವಿನ ಚಿತ್ರವನ್ನು ಆರಾಧಿಸುವುದು ತಪ್ಪೇಕೆ?

ವಿಗ್ರಹಗಳ ಆರಾಧನೆ ಬಗ್ಗೆ ಸತ್ಯವೇದ ಏನು ಹೇಳುತ್ತದೆಂದು ಅಭ್ಯಾಸಿಸುವ,

**''ಹೀಗೆ ಹೇಳುವುದರಿಂದ ಏನು ಹೇಳಿದ ಹಾಗಾಯಿತು? ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥವು ವಾಸ್ತವವೆಂದು ಅಥವಾ ವಿಗ್ರಹವು ವಾಸ್ತವವೆಂದು ನನ್ನ ಅಭಿಪ್ರಾಯವೋ? ಅಲ್ಲ, ಆದರೆ ಅನ್ಯ ಜನರು ತಾವು ಅರ್ಪಿಸುವ ಬಲಿಗಳನ್ನು ದೇವರಿಗಲ್ಲ, ದೆವ್ವಗಳಿಗೆ ಅರ್ಪಿಸುತ್ತಾರೆಂದು ನನ್ನ ಅಭಿಪ್ರಾಯವು. ನೀವು ದೆವ್ವಗಳೊಡನೆ ಭಾಗಿಗಳಾಗಿರಬೇಕೆಂಬುದು ನನ್ನ ಇಷ್ಟವಲ್ಲ. ನೀವು ಕರ್ತನ ಪಾತ್ರೆ ಮತ್ತು ದೆವ್ವಗಳ ಪಾತ್ರೆ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಕುಡಿಯಲಾರಿರಿ, ಕರ್ತನ ಪಂಕ್ತಿ ಮತ್ತು ದೆವ್ವಗಳ ಪಂಕ್ತಿ ಇವುಗಳೊಳಗೆ ಒಂದರಲ್ಲಿಯೇ ಹೊರತು ಎರಡರಲ್ಲಿಯೂ ಊಟ ಮಾಡಲಾರಿರಿ, ಕರ್ತನನ್ನು ರೇಗಿಸಬೇಕೆಂದಿದ್ದೇವೋ? ಆತನಿಗಿಂತಲೂ ನಾವು ಬಲಿಷ್ಟರೇನು?** (1 ಕೊರಿಂಥದವರಿಗೆ 10:19-22)

ದೇವರ ವಾಕ್ಯದ ಪ್ರಕಾರ ವಿಗ್ರಹಗಳು ವಾಸ್ತವವಲ್ಲ. ಅರ್ಪಿಸುವ ಬಲಿಗಳು ದೇವರಿಗಲ್ಲ ದೆವ್ವಗಳಿಗೆ ಅರ್ಪಿಸಲ್ಪಡುತ್ತವೆ. ಇದು ದೆವ್ವಗಳೊಂದಿಗೆ ಸಂಬಂಧವನ್ನು ಮತ್ತು ತಮ್ಮ ಜೀವಿತಗಳಿಗೆ ದೆವ್ವಗಳ ಆಹ್ವಾನವನ್ನು ಕೊಡುವ ಕಡೆಗೆ ನಡೆಸುತ್ತದೆ. ನಾವು ನಮ್ಮ ದೇವರಿಗೆ ಸ್ತೋತ್ರ, ಆರಾಧನೆಗಳನ್ನು ಸಲ್ಲಿಸುವಾಗ, ನಾವು ಜೀವಿಸುವ ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದುತ್ತೇವೆ, ಆತನು ನಮ್ಮ ಹೃದಯ ಮತ್ತು ಜೀವಿತಗಳಿಗೆ ಬರುತ್ತಾನೆ. ಅದೇ ರೀತಿಯಾಗಿ ಯಾರಾದರೂ ಅನ್ಯ ದೇವತೆಗಳಿಗೆ ಅಡ್ಡಬಿದ್ದು ಆರಾಧಿಸಿ ಯಜ್ಞಗಳನ್ನು ಸಮರ್ಪಿಸಿದರೆ ಅವರು ದೆವ್ವಗಳ ಅನ್ಯೋನತೆಯನ್ನು ಮತ್ತು ಅಂತಹ ದೆವ್ವ ವಿಗ್ರಹಗಳು ಕೊಡುವ ಬಲಗಳನ್ನು ಹೊಂದಿಕೊಳ್ಳುತ್ತಾರೆ.

## ಎಚ್ಚರಿಕೆಯ ಮಾತು

ವಿಗ್ರಹಗಳ ಬಗ್ಗೆ ಪೂಜ್ಯತೆ ಮನೋಭಾವನೆಯಿರುವ ನಮ್ಮ ಸ್ನೇಹಿತರೊಂದಿಗೆ ನಾವು 'ಸತ್ಯ' ತಿಳಿಸುವಾಗ ಪ್ರೀತಿಯಿಂದಲೂ ದೀನತೆಯಿಂದಲೂ ಸತ್ಯವನ್ನು ತಿಳಿಸಬೇಕು.

**''ಜ್ಞಾನ ಹೃದಯರಿಗೆ ಜಾಣರೆಂಬ ಬಿರುದು ಬರುವುದು, ಸವಿತುಟಿಯಿಂದ ಉಪದೇಶಶಕ್ತಿಯು ಹೆಚ್ಚುವುದು''** (ಜ್ಞಾನೋಕ್ತಿಗಳು 16:21)

ಧರ್ಮೋಪದೇಶಕಾಂಡ 7 ನೇ ಅಧ್ಯಾಯದಲ್ಲಿ. ದೇವರು ತನ್ನ ಜನರಿಗೆ ವಿಗ್ರಹಗಳ ಬಗ್ಗೆ ನಿರ್ದಿಷ್ಟವಾದ ಉಪದೇಶ ಕೊಡುತ್ತಾನೆ.

**''ಅವರು ದೇವರೆಂದು ಮಾಡಿಕೊಂಡ ಮರದ ವಿಗ್ರಹಗಳನ್ನು ನೀವು ಬೆಂಕಿಯಿಂದ ಸುಟ್ಟುಬಿಡಬೇಕು, ಆ ವಿಗ್ರಹಗಳ ಮೇಲಿರುವ ಬೆಳ್ಳಿ ಬಂಗಾರವನ್ನು ನೀವು ಆಶಿಸಬಾರದು ಅದನ್ನು ತೆಗೆದುಕೊಂಡರೆ ಅದು**

**ನಿಮಗೆ ಉರುಲಾಗುವುದು. ಅದು ನಿಮ್ಮ ದೇವರಾದ ಯೆಹೋವನಿಗೆ ಹೇಯವಾದದ್ದು. ಅದು ಕೇವಲ ಯೆಹೋವನದಾಗುವುದಕ್ಕೆ ನಾಶವಾಗತಕ್ಕದ್ದಾಗಿರುವುದರಿಂದ ನೀವು ಅಂಥ ವಸ್ತುವನ್ನು ಮನೆಯೊಳಕ್ಕೆ ತಂದು ಅದರಂತೆಯೇ ನಾಶಕ್ಕೆ ಗುರಿಯಾಗಬಾರದು. ನೀವು ಅದನ್ನು ಅಸಹ್ಯಪಟ್ಟು ಮುಟ್ಟದಿರಬೇಕು''.** (ಧರ್ಮೋಪದೇಶಕಾಂಡ7:25,26).

ದೇವಜನರು ಶಾಪಗ್ರಸ್ತ ವಸ್ತುಗಳನ್ನು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಬಾರದೆಂದು ದೇವರು ಎಚ್ಚರಿಕೆ ನೀಡುತ್ತಾನೆ. ವಿಗ್ರಹಗಳ ಮೇಲಿರುವ ಬೆಳ್ಳಿ ಬಂಗಾರವನ್ನು ಸಹ ತರಬಾರದು. ಅಂಥವುಗಳು ದೇವರ ಮುಂದೆ ಅಸಹ್ಯವಾದುದು. ದೇವರಿಗೆ ಹೇಯವಾದದ್ದು. ಶಾಪಗ್ರಸ್ತ ವಸ್ತುಗಳನ್ನು ಮನೆಗೆ ಯಾರಾದರೂ ತೆಗೆದುಕೊಂಡು ಬಂದರೆ ಅವರು ಆ ವಿಗ್ರಹಗಳ ಬಲದ ಬಂಧನಗಳಿಗೆ ಅಥವಾ ಶಾಪಗಳಿಗೆ ಒಳಗಾಗುತ್ತಾರೆ. ಅಲ್ಲದೆ ಬಂಧನ ಮತ್ತು ನಾಶನ ಅವರ ಜೀವಿತಗಳಲ್ಲಿ ಪ್ರವೇಶಿಸುತ್ತವೆ. ಇದು ವಿಗ್ರಹಾರಾಧನೆ ತಪ್ಪು ಅನ್ನುವುದಕ್ಕೆ ಮತ್ತೊಂದು ಕಾರಣವಾಗಿದೆ. ವಿಗ್ರಹಗಳ ಹಿಂದಿರುವ ನಾಶಕ ಶಕ್ತಿ ನಮ್ಮನ್ನು ಬಂಧನದಲ್ಲಿಡುತ್ತದೆ. ನಾವು ಅದರಂತೆಯೇ ನಾಶಕ್ಕೆ ಗುರಿಯಾಗುತ್ತೇವೆ.

ದೇವರ ಸ್ಥಾನವನ್ನು ತೆಗೆದುಕೊಳ್ಳುವ ಯಾವ ವಸ್ತುವಾದರೂ ವಿಗ್ರಹವಾಗಬಹುದು.

ನಾವು ಆರಾಧಿಸುವವುಗಳಂತೆಯೇ ಆಗುತ್ತೇವೆ. ''ಅವುಗಳನ್ನು ಮಾಡುವವರೂ ಅವುಗಳಲ್ಲಿ ಭರವಸೆ ಇಡುವವರೂ ಅವುಗಳಂತೆಯೇ. (ಕೀರ್ತನೆ 115:8) ನಾವು ಪೂಜಿಸುವಂತಹ ವಸ್ತುಗಳಂತೆಯೇ. ಆಗುತ್ತೇವೆ. ನಾವು ಯಾವಾಗ ಇಂತಹ ವಿಗ್ರಹಗಳಿಗೆ ಅಡ್ಡಬಿದ್ದು ಪೂಜಿಸುತ್ತೇವೋ ವಿಗ್ರಹಗಳಿಂದ ನಮ್ಮ ಜೀವಿತ ಪ್ರಭಾವಿತವಾಗಿ ''ಬಂಧನ''ಗಳಿಗೆ ಒಳಪಡಿಸಿ ನಾವು ಪುನಃ ಅವುಗಳಿಗೆ ಅಡ್ಡಬಿದ್ದು ಪೂಜೆಸಲ್ಲಿಸುವಂತೆ ಮಾಡುತ್ತದೆ. ಇದು ನಮ್ಮಿಂದ, ಮಕ್ಕಳಿಗೆ - ಮಕ್ಕಳಿಂದ ಅವರ ಸಂತತಿಗಳಿಗೆ ದಾಟಿ ನಮ್ಮ ವಂಶವೃಕ್ಷದವರೆಲ್ಲರೂ ಅಡ್ಡಬೀಳುವಂತೆ ಮಾಡುತ್ತದೆ.

## ವೈಯಕ್ತಿಕ ಬಂಧನದ ಪ್ರತಿಯಾಗಿ ತಲೆಮಾರಿನ ಬಂಧನ

ನಾವು ನಮ್ಮ ಜೀವಿತಗಳಲ್ಲಿ ಎಡೆಮಾಡಿಕೊಟ್ಟ ದುಷ್ಟತನದ ಕಾರ್ಯಗಳು, ನಮ್ಮನ್ನು ನಾಶಕ್ಕೆ ಒಳಪಡಿಸುತ್ತವೆ. ನಾವು ಇವನ್ನು ''ವೈಯಕ್ತಿಕ ಬಂಧನ'' ಎಂದು ತಿಳಿಸಿದ್ದೇವೆ. ಇಂತಹ ವೈಯಕ್ತಿಕ ಬಂಧನಗಳನ್ನು ಮುರಿಯದಿದ್ದರೆ, ಅವು ನಮ್ಮ ಮುಂದಿನ

ತಲೆಮಾರಿಗೂ ಮುಂದುವರೆಯುತ್ತಾ ಸಿದ್ಧಿ ಹೊಂದುವ ಬಲವನ್ನು ''ತಲೆಮಾರು ಬಂಧನ'' ಗಳೆಂದು ನಾವು ತಿಳಿಸುತ್ತೇವೆ. ಹೀಗೆ ಹಲವರು ತಮ್ಮ ಜೀವಿತಗಳಲ್ಲಿ ನೆನಸದೆ ಹಾದು ಬಂದಂತಹ ಇಂತಹ ತಲೆಮಾರು ಬಂಧನಗಳಲ್ಲಿ ಸಿಲುಕಿ ಬಳಲುತ್ತಿದ್ದಾರೆ. ನಾವು ಹಿಂದೆ ತಿಳಿಸಿದ್ದಂತೆ ಇಂತಹ ಬಂಧನಗಳ ಒಂದು ದೊಡ್ಡ ಪಟ್ಟಿಯೇ ಇದೆ: ಪಾಪಯುತ ನಡವಳಿಕೆಗಳು ಜೀವನ ಕ್ರಮದ ಕಾರ್ಯಗಳಾದ ಸುಳ್ಳು ಹೇಳುವುದು, ಮೋಸಮಾಡುವುದು, ಕೋಪ, ದೌರ್ಜನ್ಯ ಜೂಜಾಡುವದು, ಕುಡಿಕತನ, ಮಾದಕ ದ್ರವ್ಯ ಅವಲಂಬನೆ, ವ್ಯಭಿಚಾರ, ಅನೀತಿ, ಮಾರಕ ವ್ಯಕ್ತಿತ್ವ, ನಿಂದೆ, ಆತ್ಮಹತ್ಯೆಪ್ರವೃತ್ತಿ, - ಬೇರೆ ತೊಂದರೆಗಳಾದ ಗುಣವಾಗದ ರೋಗಗಳು, ವಿಚ್ಛೇದನೆ, ಹಣಕಾಸಿನ ತೊಂದರೆ, ವ್ಯಾಪಾರದಲ್ಲಿ ಸೋಲು, ಬೇರೆ ಕ್ಷೇತ್ರದಲ್ಲೂ ಸೋಲು, ಕುಗ್ಗುವಿಕೆ, ಮಾನಸಿಕ ಭಾವನೆಗಳು ಮುರಿದು ಬೀಳುವದು, ವಿಚಾರಹೀನ ಭಯ, ಅಭದ್ರತೆ, ಬಡತನ, ತಳ್ಳಲ್ಪಡುವಿಕೆ, ಆಹಾರ ಸೇವನೆಯಲ್ಲಿ ಏರಿಳಿತಗಳು, ನಿರುದ್ಯೋಗ, ವಿವಾಹವಲ್ಲದ ಮೊದಲು ಮಕ್ಕಳ ಜನನ, ಅಸಿದ್ಧಿ ಗರ್ಭಧಾರಣೆ, ಅಪಘಾತಗಳು, ಬೋರಲು ಬಿದ್ದಿರುವುದು - ಅಸ್ವಾಭಾವಿಕ ಅಕಾಲಿಕ ಮರಣಗಳು ಇವೆಲ್ಲವೂ ತಲೆಮಾರು ಬಂಧನಗಳಿಂದ ಉಂಟಾಗುತ್ತವೆ.

ಇಂತಹ ವೈಯಕ್ತಿಕ ಮತ್ತು ತಲೆಮಾರು ಬಂಧನಗಳನ್ನು ಮುರಿಯುವುದನ್ನು ಕಲಿಯುವುದು, ನಮ್ಮ ಅಧ್ಯಯನದ ಉದ್ದೇಶವಾಗಿದೆ.

## ದುರಾಶೆ ಅಥವಾ ಲೋಭತ್ವವು ಸಹ ಒಂದು ವಿಗ್ರಹಾರಾಧನೆ

ಮೂರ್ತಿಗಳಿಗೂ ಮತ್ತು ಚಿತ್ರಗಳಿಗೂ ಅಥವಾ ಆಕೃತಿಗಳಿಗೂ ಅಡ್ಡಬೀಳುವದು ವಿಗ್ರಹರಾಧನೆ ಎಂದು ಹಳೆ ಒಡಂಬಡಿಕೆ ತಿಳಿಸುತ್ತದೆ. ಆದರೆ ಹೊಸಒಡಂಬಡಿಕೆಯಲ್ಲಿ ಇದು ವಿಶಾಲ ಚಿತ್ರಣವನ್ನು ನೀಡುತ್ತದೆ. ಅಂದರೆ ದುರಾಶೆಯು ಸಹ ಒಂದು ವಿಗ್ರಹಾರಾಧನೆ ಎಂದು ಹೊಸ ಒಡಂಬಡಿಕೆ ತಿಳಿಸುತ್ತದೆ.

**''ಆದುದರಿಂದ ನಿಮ್ಮಲ್ಲಿರುವ ಭೂ ಸಂಬಂಧವಾದ ಭಾವನೆಗಳನ್ನು ಸಾಯಿಸಿರಿ. ಜಾರತ್ವ ಬಂಡುತನ, ಕಾಮಾಭಿಲಾಷೆ ದುರಾಶೆ ವಿಗ್ರಹಾರಾಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ''.** (ಕೊಲೊಸ್ಸೆಯವರಿಗೆ 3:5)

**''ಜಾರರು ದುರಾಚಾರಿಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ''** (ಎಫೆಸದವರಿಗೆ 5:5).

ಯಾವುದೇ ರೀತಿಯ ದುರಾಶೆ, ಲೋಭ ಅಥವಾ ಕಾಮಾಭಿಲಾಷೆ ವಿಗ್ರಹಾರಾಧನೆಗೆ ಸಮಾನವಾಗಿದೆ. ಉದಾಹರಣೆಗೆ ಯಾರಾದರೂ ಅತಿಯಾದ ಜಾರತ್ವ ಕಾಮಾಭಿಲಾಷೆಗೆ ಒಳಗಾಗಿದ್ದರೆ ಅದು ಸಹ ವಿಗ್ರಹಾರಾಧನೆಯಾಗುತ್ತದೆ. ಇದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ದುರಾಚಾರ, ಅಶ್ಲೀಲ, ಕುಡಿಕುತನ, ನೀತಿಗೆಟ್ಟ ಜೀವನಕ್ರಮ ಮುಂತಾದವುಗಳು ಸಹ ಇದರಲ್ಲಿ ಸೇರುತ್ತವೆ. ಇಂತಹ ವಿಗ್ರಹಾರಾಧನೆಗೆ ಸಂಬಂಧಿಸಿದ ಎಲ್ಲಾ ವಿಷಯಗಳು ಒಬ್ಬ ವ್ಯಕ್ತಿಯನ್ನು ಬಂಧನದಲ್ಲಿಡುತ್ತವೆ. ನಮ್ಮ ಮನೆಗಳಲ್ಲಿ ವಿಗ್ರಹಗಳಿಲ್ಲದಿರಬಹುದು ಆದರೆ ನಮ್ಮ ಹೃದಯಗಳಲ್ಲಿ ಲೋಭವಿದೆಯೋ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು.

## ತಲೆಮಾರಿನ ಆಶೀರ್ವಾದಗಳು

ಸತ್ಯವೇದವು ಮತ್ತೊಂದೆಡೆ ತಲೆಮಾರಿನ ಆಶೀರ್ವಾದಗಳ ಕುರಿತು ತಿಳಿಸುತ್ತದೆ. ಅಬ್ರಹಾಮನ ಜೀವಿತದಲ್ಲಿನ ತಲೆಮಾರಿನ ಆಶೀರ್ವಾದ ಇದಕ್ಕೆ ದೊಡ್ಡ ಉದಾಹರಣೆಯಾಗಿದೆ. ದೇವರ ಅಬ್ರಹಾಮನಿಗೆ ನೀನು ಮತ್ತು ನಿನ್ನ ಸಂತತಿಯವರು ಆಶೀರ್ವಾದ ಹೊಂದುವಿರಿ ಎಂದು ಹೇಳಿದನು.

**''ನಿನಗೂ ನಿನ್ನ ಸಂತತಿಗೂ ದೇವರಾಗಿರುವೆನೆಂದು ನಾನು ನಿನಗೋಸ್ಕರವೂ ನಿನ್ನ ಸಂತತಿಯ ಎಲ್ಲಾ ತಲಾಂತರಗಳಿಗೋಸ್ಕರವೂ ಮಾಡಿಕೊಂಡ ನನ್ನ ಒಡಂಬಡಿಕೆಯನ್ನು ಸ್ಥಿರಪಡಿಸುವೆನು''**. (ಆದಿಕಾಂಡ 17:7)

**''ನಾನಂತೂ ಅವರೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು, ನೋಡಿರಿ, ನಿಮ್ಮಲ್ಲಿ ಆವೇಶಿಸಿರುವ ನನ್ನ ಆತ್ಮವೂ ನಿಮ್ಮ ಬಾಯಿಗೆ ನಾನು ಕೊಟ್ಟಿರುವ ಮಾತುಗಳೂ ನಿಮ್ಮ ಬಾಯಿಂದಾಗಲಿ ನಿಮ್ಮ ಸಂತತಿಯ ಬಾಯಿಂದಾಗಲಿ ಇಂದಿನಿಂದ ಎಂದಿಗೂ ತೊಲಗುವುದಿಲ್ಲ ಎಂದು ಯೆಹೋವನು ಅನ್ನುತ್ತಾನೆ''**. (ಯೆಶಾಯ 59:21).

ಜೀವಿಸುವ ಮತ್ತು ಸತ್ಯದೇವರೊಂದಿಗಿನ ಒಡಂಬಡಿಕೆ ತಲೆಮಾರಿನ ಆಶೀರ್ವಾದಗಳನ್ನುಂಟುಮಾಡುತ್ತದೆ.

> ನಾವು ತಲೆಮಾರಿನ ಆಶೀರ್ವಾದಗಳನ್ನು ಅಥವಾ ತಲೆಮಾರಿನ ಬಂಧನಗಳನ್ನು ಪ್ರಾರಂಭಿಸುವವರು ಆಗಬಹುದು.

# 2

# ಅಪರಾಧ ಮತ್ತು ಪಾಪ

## ಅಪರಾಧ / ಅಧರ್ಮ, ಪ್ರತಿ ಪಾಪ

'ಅಪರಾಧ' ಮತ್ತು 'ಪಾಪ' ಪದಗಳ ಅರ್ಥ ತಿಳಿದುಕೊಂಡರೆ ತಲೆಮಾರಿನ ಸಂತತಿಯ ಬಂಧನಗಳನ್ನು ಹೆಚ್ಚಾಗಿ ಅರ್ಥಮಾಡಿಕೊಳ್ಳಬಹುದು, ಎರಡು ಪದಗಳು ಸತ್ಯವೇದದಲ್ಲಿ ಉಪಯೋಗಿಸಲ್ಪಟ್ಟಿವೆ.

**''ಕರ್ತನೇ, ನಿನ್ನ ಅನುಗ್ರಹವು ನನಗೆ ದೊರಕಿದ್ದಾದರೆ ನೀನೇ ನಮ್ಮ ಜೊತೆಯಲ್ಲಿ ಬರಬೇಕು. ನಮ್ಮ ಜನರು ಮೊಂಡರೇ ಆದಾಗ್ಯೂ ನೀನು ನಮ್ಮ ಪಾಪಗಳನ್ನೂ, ಅಧರ್ಮಗಳನ್ನೂ ಕ್ಷಮಿಸಿ ನಿನ್ನ ಜನರಾಗುವಂತೆ ನಮ್ಮನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದನು''**(ವಿಮೋಚನಕಾಂಡ 34:9)

ಅಪರಾಧ/ಅಧರ್ಮದ ಮೂಲಪದವು ಇಬ್ರಿಯ ಭಾಷೆಯ ''avon'' ಅವೊನ್ ಎಂಬ ಪದದಲ್ಲಿದೆ. 'ವಕ್ರಸ್ವಭಾವ' ಅಥವಾ 'ವಿಪರೀತ ಮತಿ' ಎಂಬುದು ಇದರ ಅರ್ಥ. ''ಪಾಪ'' ವೆಂಬುದು ''Khatawaw'' (ಕಥಾವವಾ) ಅಸಭ್ಯತೆ ಅಥವಾ ತಪ್ಪು ನಡವಳಿಕೆಯೆಂಬುದು ಇದರ ಅರ್ಥ. 'ಅಪರಾಧವು' ಒಬ್ಬನ ಗುಣವನ್ನು ಗುರ್ತಿಸಿದರೆ, ಪಾಪವು ತಪ್ಪು ಮಾಡುವ ಕಾರ್ಯವನ್ನು ಅಥವಾ ಅಸಭ್ಯ ನಡವಳಿಕೆಯನ್ನು ಪ್ರತಿಬಿಂಬಿಸುತ್ತದೆ. ಇದು ಮಾರ್ಗ ತಪ್ಪುವುದು ಅಥವಾ ದೇವರ ಆಜ್ಞೆಯನ್ನು ಮೀರುವುದೇ ಆಗಿದೆ.

## ತಲೆಮಾರಿನಿಂದ ಹಾದುಬಂದ ಅಪರಾಧ

ಅಪರಾಧವು ಸಂತತಿಯಿಂದ ಸಂತತಿಗೆ ಹಾದು ಬಂದಿದೆ ಎಂದು ಕರ್ತನು ಹೇಳಿದ್ದಾನೆ. ಒಬ್ಬನು ಪಾಪಮಾಡಿದರ, ಅಪರಾಧವು ಆ ವ್ಯಕ್ತಿಯ ಪಾಪಕ್ಕೆ ಪ್ರಚೋದನೆ ಕೊಡುತ್ತದೆ. ಇದು ಸಂತತಿಗೂ ಮುಂದುವರೆಯುತ್ತದೆ. ಪ್ರಲಾಪಗಳು 5 ನೇ ಅಧ್ಯಾಯದಲ್ಲಿ ಅಪರಾಧಕ್ಕೆ ಒಳಗಾಗಿ ಪಾಪಮಾಡಿದ ಪಿತೃಗಳಿಂದ, ಅವರ ಮಕ್ಕಳಿಗೆ ಅದು ಮುಂದುವರೆದದ್ದನ್ನು ನೋಡುತ್ತೇವೆ.

**''ನಮ್ಮ ಪಿತೃಗಳು ಪಾಪಮಾಡಿ ಇಲ್ಲದೆ ಹೋದರು ಅವರ ದೋಷ ಫಲವನ್ನು ನಾವು ಅನುಭವಿಸಬೇಕಾಯಿತು''**. (ಪ್ರಲಾಪಗಳು 5:7)

**''ಕರ್ತನಾದ ಯೆಹೋವನೇ! ಆಹಾ, ನೀನು ಭುಜವನ್ನೆತ್ತಿ ನಿನ್ನ ಮಹಾಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ, ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ ನೀನು ಸಾವಿರಾರು ತಲೆಗಳವರೆಗೆ ದಯೆತೋರಿಸುವವನೂ ತಂದೆಗಳ ದೋಷಫಲವನ್ನು ಅವರ ತರುವಾಯ ಮಕ್ಕಳ ಮಡಲಿಗೆ ಹಾಕುವವನೂ ಆಗಿದ್ದೀ, ನೀನು ಮಹಾ ಪರಾಕ್ರಮಿಯಾದ ದೇವರು, ಸೇನಾಧೀಶ್ವರನಾದ ಯೆಹೋವನೆಂಬುದು ನಿನ್ನ ನಾಮಧೇಯ''.** (ಯೆರೆಮೀಯ 32:17,18)

**''ಹುಟ್ಟಿದಂದಿನಿಂದ ನಾನು ಪಾಪಿಯೇ ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ''** (ಕೀರ್ತನೆ 51:5)

ನಾವು ಹುಟ್ಟಿದಂದಿನಿಂದಲೇ ದುಷ್ಟತನವು ನಮ್ಮಲ್ಲಿ ಮುಂದುವರೆದಿದೆ.

## ದೇವರು ಇದನ್ನು ಅನುಮತಿಸುವುದರಲ್ಲಿ ನ್ಯಾಯವಂತನೋ?

ಪಿತೃಗಳು ಮಾಡಿದ ದೋಷಫಲವನ್ನು ಮುಂದಿನ ಪೀಳಿಗೆಯವರು ಅನುಭವಿಸುವುದು ನ್ಯಾಯಯುತವಾದುದಲ್ಲ. ಒಬ್ಬನು ಇದನ್ನು ಹೇಗೆ ವಿವರಿಸುತ್ತಾನೆ?

ದುಷ್ಟತನದ ನಿಮಿತ್ತ ತಂದೆಗಳಿಂದ, ಮಕ್ಕಳಿಗೆ ಮೊಮ್ಮಕ್ಕಳಿಗೆ ದೋಷವನ್ನುಂಟು ಮಾಡುವುದು ದೇವರು ಅನ್ಯಾಯಸ್ಥನೆಂದು ತೋರಿಸುತ್ತದೆ. ಆದರೆ ಬೇರೆ ಸ್ಥಳಗಳಲ್ಲಿ ಓದುವಾಗ, ಪಾಪ ಮಾಡಿದ ಆತ್ಮವೇ ಸಾಯುವುದು ಎಂಬುದಾಗಿ ನೋಡುತ್ತೇವೆ, ದೇವರು ಅದನ್ನು ಸ್ಪಷ್ಟಪಡಿಸಿದ್ದಾನೆ. ಇವುಗಳನ್ನು ಮುಂದಿನ 2 ವಚನ ಭಾಗಗಳಲ್ಲಿ ಓದಬಹುದು.

**''ಮಕ್ಕಳ ಪಾಪದ ದೆಸೆಯಿಂದ ತಂದೆಗೂ ತಂದೆಯ ಪಾಪದ ದೆಸೆಯಿಂದ ಮಕ್ಕಳಿಗೂ ಮರಣ ಶಿಕ್ಷೆಯಾಗಬಾರದು ಪ್ರತಿಯೊಬ್ಬನೂ ತನ್ನ ಪಾಪದಫಲವನ್ನು ತಾನೇ ಅನುಭವಿಸಬೇಕು''** (ಧರ್ಮೋಪದೇಶಕಾಂಡ 24:16)

**ಯೆಹೋವನು ಮತ್ತೊಂದು ವಾಕ್ಯವನ್ನು ನನಗೆ ದಯಪಾಲಿಸಿದನು ತಂದೆಗಳು ಹುಳಿದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಚಳಿತುಹೋಗಿವೆ ಎಂಬ ಗಾದೆಯನ್ನು ನೀವು ಇಸ್ರಾಯೇಲ್ ದೇಶದ ವಿಷಯವಾಗಿ ಹೇಳುವದೇಕೆ? ಕರ್ತನಾದ ಯೆಹೋವನು ಇಂತೆನ್ನುತ್ತಾನೆ. ನನ್ನ ಜೀವದಾಣೆ ನೀವು ಈ ಗಾದೆಯನ್ನು ಇಸ್ರಾಯೇಲಿನಲ್ಲಿ ಇನ್ನು ಎತ್ತಬೇಕಾಗುವದಿಲ್ಲ. ಇಗೋ ಸಕಲ ನರಪ್ರಾಣಿಗಳು ನನ್ನವೇ; ತಂದೆಯೇನು, ಮಗನೇನು, ನರಪ್ರಾಣಿಗಳೆಲ್ಲವೂ ನನ್ನಧೀನದಲ್ಲಿವೆ: ಪಾಪ ಮಾಡುವ ಪ್ರಾಣಿಯೇ ಸಾಯುವನು. ಪಾಪ ಮಾಡುವವನೇ ಸಾಯುವನು. ಮಗನು ತಂದೆಯ ದೋಷ ಫಲವನ್ನು ಅನುಭವಿಸನು, ತಂದೆಯು ಮಗನ ದೋಷ ಫಲವನ್ನು ಅನುಭವಿಸನು, ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ''** (ಯೆಹೆಜ್ಕೇಲನು 18:1-4,20)

ತಂದೆಯು ಮಕ್ಕಳ ನಿಮಿತ್ತ ಸಾಯುವುದಿಲ್ಲ ಪ್ರತಿಯೊಬ್ಬನು ಅವನ ಪಾಪಕ್ಕೆ ತಕ್ಕಂತೆ ಸಾಯುವನು. ಇಲ್ಲಿ ''ಪಾಪ'' ಅನ್ನುವ, ಪದಕ್ಕೆ ಇಬ್ರಿಯ ಭಾಷೆಯ ಪದ khate (ಕಾಟೇ) ಅಂದರೆ ಪಾಪಕೃತ್ಯ ಅಥವಾ ಅಪರಾಧವೆಂದು ಉಲ್ಲೇಖವಾಗಿದೆ.

ಮೊದಲು ನೋಡಿದ ಐದು ವಚನಗಳಲ್ಲಿ ದುಷ್ಟತನವು ತಂದೆಯಿಂದ ಮಕ್ಕಳಿಗೂ, ಮಕ್ಕಳಿಂದ ಅವರ ಮಕ್ಕಳಿಗೂ ಹಾದುಹೋಗುವುದೆಂದು ನೋಡಿದ್ದೆವೆ. ಮೇಲಿನ ಎರಡು ವಚನಭಾಗಗಳಲ್ಲಿ ಅದು ವಿರೋಧಾತ್ಮಕವಾದುದು. ಇದು ನಮ್ಮನ್ನು ಗೊಂದಲಕ್ಕೆ ಸಿಲುಕಿಸಬಹುದು. ಆದರೆ ದುಷ್ಟತನ ಮತ್ತು ಪಾಪದ ವ್ಯತ್ಯಾಸವನ್ನು ಪುನರಾವರ್ತಿಸಿ ಅಭ್ಯಾಸಿಸಿದರೆ ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು.

## ದೇವರು ನ್ಯಾಯವಂತ ದೇವರು

ದೇವರು ನ್ಯಾಯವಂತನಾಗಿದ್ದಾನೆ. ಆತನಲ್ಲಿ ಅನ್ಯಾಯವಿಲ್ಲ ಎಂಬುದು ಪ್ರಶ್ನಾಸ್ಪದವಿಲ್ಲದ ವಿಷಯವಾಗಿದೆ. ನ್ಯಾಯಸ್ಥಾನದ ವ್ಯವಸ್ಥೆಯಿಂದ ಹೊರಬಂದ ಪದವಾದ ''ದಂಡ'' ಎಂಬುದನ್ನು ಮತ್ತು ತಪ್ಪು ಕ್ರಿಯೆಗಳ ಪ್ರತಿಘಾತದ ಪದವಾದ ''ಕಾರ್ಯದಫಲ''ದ ನಡುವಿನ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬೇಕು. ಪಾಪ ಮಾಡಿದ ವ್ಯಕ್ತಿ, ವೈಯಕ್ತಿಕವಾಗಿ ಪಾಪದ 'ದಂಡ' ತೆರಬೇಕು. ಆ ಪಾಪದ ಪ್ರತಿಘಾತದ ಫಲ ಪಾಪ ಮಾಡಿದ ವ್ಯಕ್ತಿಗಿಂತ ಹೆಚ್ಚು ಜೀವಿತಗಳ ಮೇಲೆ ಪರಿಣಾಮ ಬೀರುತ್ತದೆ.

ಉದಾಹರಣೆಗೆ ಒಂದು ಕುಟುಂಬದಲ್ಲಿ ತಂದೆಯು ವ್ಯವಹಾರ ನಿರ್ವಹಣಾ ಮಂಡಳಿಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದು. ತಂದೆಯು ಹಣದಾಸೆಗೆ ಒಳಗಾಗಿ ವಂಚನೆಯಿಂದ ಹಣ ತಿಂದುಹಾಕಿದರೆ, ಆ ಪ್ರದೇಶದ ಕಾನೂನು ಆತನನ್ನು ತಪ್ಪಿತಸ್ಥನೆಂದು ನಿರ್ಣಯಿಸಿ ಹತ್ತು ವರ್ಷಗಳ ಜೈಲುವಾಸ ವಿಧಿಸಿದರೆ ಆತನ ಪಾಪದ ದಂಡವಾಗಿ ಹತ್ತು ವರ್ಷ ಜೈಲುವಾಸ, ಆದರೆ ಆತನ ಕುಟುಂಬ, ಪತ್ನಿ, ಆತನ ಮಕ್ಕಳು ಮತ್ತು ಆತನ ಮೊಮ್ಮಕ್ಕಳು ಸಹ ಆತನ ಅಪರಾಧದ ಕಾರ್ಯದ ಫಲ ಅನುಭವಿಸಬೇಕಾಗುತ್ತದೆ. ಕುಟುಂಬದ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ, ಕುಟುಂಬವು ಮಾನಸಿಕ ವೇದನೆಗಳನ್ನು ಅನುಭವಿಸಬೇಕಾಗುತ್ತದೆ. ಅಪರಾಧದ ಕಾರ್ಯದ ಫಲವು ಅಪರಾಧದ ದಂಡಕ್ಕಿಂತ ಬಹಳ ವಿಶಾಲವಾಗಿರುತ್ತದೆ.

ಧರ್ಮೋಪದೇಶಕಾಂಡ, 24 ನೇ ಅಧ್ಯಾಯ ಮತ್ತು ಯೆಹೆಜ್ಕೇಲನು 18 ನೇ ಅಧ್ಯಾಯದಲ್ಲಿ ದೇವರು ''ಪಾಪದ ದಂಡ''ವನ್ನು ಉಲ್ಲೇಖಿಸುತ್ತಾನೆ. ''ಪಾಪ

ಮಾಡುವ ಪ್ರಾಣಿಯೇ ಸಾಯುವುದು'' - ಎಂಬುದಾಗಿದ್ದರೆ ಉಳಿದ ಐದು ಭಾಗಗಳಲ್ಲಿ (ವಿಮೋಚನಕಾಂಡ 20:3-6, 34:7 ಅರಣ್ಯಕಾಂಡ 14:18 ಧರ್ಮೋಪದೇಶಕಾಂಡ 5:9 ಯೆರೆಮೀಯ 32:18) ಇಲ್ಲಿ ದೋಷಫಲವು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಮುಂದುವರೆಯುವುದನ್ನು ನೋಡುತ್ತೇವೆ. ಆದರೆ ನಾವು ಇಲ್ಲಿ ಪಾಪದ ಫಲದ ಕುರಿತು ವಿವರಿಸುತ್ತಿದ್ದೇವೆ. ಕೆಲವು ಪಾಪಗಳು' ದಂಡ' ತಂದರೂ ಸಹ ಅತ್ಯುನ್ನತ ಪಾಪದ ಕಾರ್ಯಫಲಗಳನ್ನು ಅನುಭವಿಸಬೇಕಾಗುತ್ತದೆ (ಉದಾಃ ವಿಗ್ರಹಾರಾಧನೆ). ದುರಾತ್ಮನ ಕಾರ್ಯಗಳಿಗೆ ಅಸ್ಪದ ಕೊಟ್ಟಂತಾಗಿ ಅದು ತಲೆಮಾರುಗಳವರೆಗೂ ಮುಂದುವರೆಯುತ್ತದೆ. ಪ್ರತಿ ಸಂತತಿಯು ಈ ''ಕಾರ್ಯದ ಫಲ'' ವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ದೇವರು ನ್ಯಾಯವಂತನಾಗಿ ದುಷ್ಟನ ಕಾರ್ಯಗಳನ್ನು 'ದಂಡ'ದ ಮೂಲಕ ಶಿಕ್ಷಿಸುತ್ತಾನಾದರೂ, ಅವನ ಪಾಪದ ಕಾರ್ಯದ ಫಲ ಅವನಿಂದ ಅವನ ಅಥವಾ ಅವಳ ಸಂತತಿಗೂ ಮುಂದುವರೆಯುತ್ತದೆ. ಯಾರಾದರೂ ಒಬ್ಬನು ಮೊದಲ ಹೆಜ್ಜೆ ತೆಗೆದು ಅಂತಹ ಸಂತತಿಯ ಬಂಧನಗಳನ್ನು ಅಧಿಕಾರದಿಂದ, ಸ್ವತಂತ್ರವಾಗಿ ಮುರಿಯುವವರೆಗೂ, ದೇವರು ಮಧ್ಯಪ್ರವೇಶಿಸಿ ಅವುಗಳನ್ನು ತಡೆಯುವುದಿಲ್ಲ. ನಾವು ಸ್ವತಂತ್ರರಾಗಲು ದೇವರ ವಾಕ್ಯ ಬೋಧಿಸುವುದನ್ನು ಮಾಡುವವರಾಗಿರಬೇಕು.

ವೈಯಕ್ತಿಕವಾಗಿ ಪಾಪಮಾಡಿದವನು ಪಾಪದ 'ದಂಡ'ವನ್ನು ನೀಡುತ್ತಾನೆ. ಪಾಪ ಕಾರ್ಯದ ಫಲವನ್ನು ಪಾಪ ಮಾಡಿದವನಿಗಿಂತ ಹೆಚ್ಚು ಜನರ ಜೀವಿತಗಳು ಅನುಭವಿಸಬೇಕಾಗುತ್ತದೆ.

# 3

# ಕುಟುಂಬದ ಬಂಧನಗಳಿಗೆ ಪ್ರವೇಶ ಕೊಡುವುದು ಯಾವುದು?

## ಶಾಪಗಳಿಗೂ ಕಾರಣವಿದೆ

**'' ಕುಪ್ಪಳಿಸುತ್ತಿರುವ ಗುಬ್ಬಿಯಂತೆ, ಹಾರಾಡುವ ಬಾನಕ್ಕಿಯ ಹಾಗೆ, ನಿಮಿತ್ತವಿಲ್ಲದೆ ಕೊಟ್ಟ ಶಾಪವು ಎರಗಿ ನಿಲ್ಲದು''** (ಜ್ಞಾನೋಕ್ತಿ 26:2)

ಶಾಪಗಳಿಗೆ ಒಂದು ಕಾರಣವಿದೆ. ತಾವಾಗಿಯೇ ಆಗುವುದಿಲ್ಲ. ಗುಬ್ಬಿ ಮತ್ತು ಬಾನಕ್ಕಿಗಳು ತಾವಾಗಿಯೇ ಹಾರಾಡುವುದಿಲ್ಲ ಬದಲಾಗಿ ''ಆಂತರಿಕ ದಿಕ್ಸೂಚಿಯಿಂದ'' ಮಾರ್ಗದರ್ಶನ ಹೊಂದಿರುತ್ತವೆ. ಹಾಗೆಯೇ, ಶಾಪಗಳು ಆಕಸ್ಮಿಕವಾಗಿ ಪ್ರವೇಶಿಸುವುದಿಲ್ಲಾ ಬದಲಾಗಿ ಶಾಪದ ಹಿಂದೆ ಬಲವಾದ ಕಾರಣಗಳಿರುತ್ತವೆ. ಹೀಗೆ ಶಾಪಗಳು ಹೇಗೆ ಕೆಲಸಮಾಡುತ್ತವೆಂದು ಗ್ರಹಿಕೆಯುಂಟಾದಾಗ ಅದರ ಮುನ್ನೆಚ್ಚರಿಕೆಯ ಕ್ರಮಗಳನ್ನು ಅಥವಾ ಅವುಗಳನ್ನು ತಪ್ಪಿಸುವ ಕ್ರಮಗಳನ್ನು ತೆಗೆದುಕೊಳ್ಳಬಹುದು. ನಮ್ಮ ಜೀವಿತಗಳಲ್ಲಿ ಕುಟುಂಬದ ಸಂತತಿಯ ಬಂಧನಗಳಿಗೆ ಆಸ್ಪದಕೊಟ್ಟ ದುಷ್ಟತನದ ಕಾರ್ಯಗಳನ್ನೂ ಅದರ ಕಾರಣಗಳನ್ನೂ ಗಮನಿಸಬೇಕು.

## ವಿಗ್ರಹಾರಾಧನೆ/ಸುಳ್ಳು ದೇವತೆಗಳು

ಈ ಪುಸ್ತಕದಲ್ಲಿ ಇದರ ಕುರಿತು ಮೊದಲೇ ವಿವರಿಸಿದ್ದೇವೆ. ಸುಳ್ಳು ದೇವರುಗಳಿಗೆ ಅಡ್ಡಬಿದ್ದು ಪೂಜೆ ಮಾಡಿದರೆ ದೋಷ ಫಲವು ಮುಂದಿನ ಸಂತತಿ ಯವರೆಗೂ ಬರುತ್ತದೆ. (ವಿಮೋಚನಕಾಂಡ 20:5)

## ಯಜ್ಞಗಳು ಮತ್ತು ಸಮರ್ಪಣೆಗಳು

ಯಾರಾದರೂ ಸುಳ್ಳು ದೇವರು ಅಥವಾ ದೇವತೆಗಳಿಗೆ ತಮ್ಮ ಮಗು ಅಥವಾ ಕುಟುಂಬವನ್ನು ಯಜ್ಞವಾಗಿ ಅಥವಾ ಸಮರ್ಪಣೆ ಮಾಡಿದರೆ ಇದು ಕುಟುಂಬದ ಬಂಧನಗಳುಂಟಾಗಲು ಅವಕಾಶ ಮಾಡಿಕೊಡುತ್ತದೆ.

## ಹರಕೆಗಳು

ಹರಕೆಗಳೆಂದರೆ, ಒಬ್ಬನು ಭಕ್ತಿಭಾವನೆಯಿಂದ, ತನ್ನನ್ನು ಯಾವುದಾದರೂ ವಾಗ್ದಾನಕ್ಕೆ ನಿಂಬಂಧನೆಗೆ ಅಥವಾ ಸೇವೆಗೆ ವೈಯಕ್ತಿಕವಾಗಿ ಕಟ್ಟಿಕೊಂಡ ಕಾರ್ಯವಾಗಿರುತ್ತದೆ.

ಹರಕೆಗಳು ನಕಾರಾತ್ಮಕವಾದುವು, ಪಾಪದಿಂದ ತುಂಬಿದವುಗಳು, ಪ್ರತ್ಯೆಕ್ಷವಾಗಿ ಅಥವಾ ಪರೋಕ್ಷವಾಗಿ ದೆವ್ವಗಳಿಗೆ ಮಾಡಲ್ಪಟ್ಟಿರುವವುಗಳಾಗಿದ್ದು, ದೆವ್ವಗಳ ಕಾರ್ಯಗಳು ಮತ್ತು ಬಂಧನಗಳಿಗೆ ಎಡೆಮಾಡಿಕೊಡುತ್ತವೆ. ಉದಾಹರಣೆಗೆ ಯಾವುದಾದರೂ ಒಂದು ಕೋರಿಕೆಯನ್ನು ಹರಕೆಗಳನ್ನು ಸಲ್ಲಿಸುತ್ತೇನೆಂದು ಕೇಳಿದರೆ, ವಿಗ್ರಹಗಳಿಗೆ ಹರಕೆ ಕಟ್ಟಿಕೊಂಡರೆ, ಇಂತಹ ಹರಕೆಗಳು ತಲೆಮಾರಿನ ಬಂಧನಗಳಿಗೆ ಅವಕಾಶ ಮಾಡಿಕೊಡುತ್ತವೆ.

## ಪಾಪಯುತ ಕರಾರುಗಳು

ಪಾಪಗಳನ್ನು ಒಪ್ಪಿಕೊಳ್ಳದಿರುವುದು ದೆವ್ವಗಳ ಕಾರ್ಯಗಳಿಗೆ ಮಾರ್ಗ ತರೆಯುತ್ತವೆ. ಅರಸನಾದ ದಾವೀದನು ಉತ್ತಮ ಉದಾಹರಣೆ, (2 ಸಮುವೇಲ 12) ಬತ್ಷೆಬೆಯನ್ನು ಬಯಸಿದ್ದು, ವ್ಯಭಿಚಾರಮಾಡಿದ್ದು ಮತ್ತು ಊರೀಯನನ್ನು ಕೊಂದುಹಾಕಿದ್ದು, ಪ್ರವಾದಿಯಾದ ನಾತಾನನು, ದಾವೀದನಿಗೆ ನಿನ್ನ ನೀಚಕೃತ್ಯಗಳಿಂದ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವುದಿಲ್ಲ ಎಂಬುದಾಗಿ ಎಚ್ಚರಿಸಿದ್ದು ಸ್ಪಷ್ಟವಾಗಿದೆ.

**‘‘ಹೀಗಿರಲು ನೀನು ಯೆಹೋವನಾದ ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವುದನ್ನು ಮಾಡಿದ್ದೇನು? ನೀನು ಹಿತ್ತಿಯನಾದ ಊರೀಯನನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು, ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿ. ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದದರಿಂದಲೂ ಹಿತ್ತಿಯನಾದ ಊರೀಯನನ್ನು ಅಮ್ಮೋನಿಯರ ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು, ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡದರಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವುದಿಲ್ಲ. ಯೆಹೋವನಾದ ನನ್ನ ಮಾತನ್ನು ಕೇಳು ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿಯರನ್ನು ತೆಗೆದು ನಿನ್ನೆದುರಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು. ನೀನು ಅದನ್ನು ಗುಪ್ತವಾಗಿ ಮಾಡಿದಿ, ನಾನು ಹೇಳುವ ಮಾತಾದರೋ ಎಲ್ಲಾ ಇಸ್ರಾಯೇಲ್ಯರ ಮುಂದೆ ಪ್ರಕಟವಾಗಿ ನೆರವೇರುವದು ಎಂಬದೇ ಅಂದನು. ಆಗ ದಾವೀದನು ನಾತಾನನಿಗೆ - ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿದ್ದೇನೆ ಎಂದು ಹೇಳಿದನು. ನಾತಾನನು ಅವನಿಗೆ ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವುದಿಲ್ಲ.** (2 ಸಮುವೇಲ 12:9-13)

'ಕತ್ತಿಯು' ನಾಶವನ್ನು, ಹಿಂಸೆಯನ್ನು ಮರಣವನ್ನು ಸೂಚಿಸುತ್ತದೆ. ದಾವೀದನ ನೀಚಕಾರ್ಯಗಳು ಆತನ ಕುಟುಂಬವನ್ನು ನಾಶನ, ಹಿಂಸೆ, ಮರಣಕ್ಕೆ ಸಿಲುಕುವಂತೆ ಮಾಡಿತು. ದಾವೀದನ ಮಗನಾದ ಅಮ್ನೋನನು ತನ್ನ ತಂಗಿಯನ್ನು ಮೋಹಿಸಿ, ಕೆಡಿಸಿದನು, ದಾವೀದನ ಮತ್ತೊಬ್ಬ ಮಗನಾದ ಅಬ್ಷಾಲೋಮನು, ತನ್ನ ತಂದೆಗೆ ವಿರುದ್ದವಾಗಿ ದಂಗೆ ಎದ್ದದ್ದನ್ನು ಗಮನಿಸಬಹುದು.

ಒಂದು ಪಾಪದ ಕೃತ್ಯವು ಕೆಲವೊಮ್ಮೆ ನಾವು ನೆನಸಿದ್ದಕಿಂತಲೂ ದೀರ್ಘವಧಿಯ ಪರಿಣಾಮ ಬೀರಬಹುದು. ಉದಾಹರಣೆಗೆ ಮೊಂಡತನದ ಭ್ರೂಣಹತ್ಯೆ ಕಾರ್ಯವು ಎಲ್ಲಾ ವಸ್ತುಗಳನ್ನು ನಾಶ ಮಾಡುವ ದುಷ್ಟತನದ ನಾಶಕರ ಕಾರ್ಯಕ್ಕೆ ಮಾರ್ಗಮಾಡಿಕೊಡುತ್ತದೆ. ಯಾರಾದರೂ ಗರ್ಭಪಾತ ಮಾಡಿಸಿಕೊಂಡರೆ ಅದು ಬೇರೆ ಕ್ಷೇತ್ರಗಳನ್ನು ನಾಶಪಡಿಸುವ ಕೆಟ್ಟ ಮರಣಕರ ಕಾರ್ಯಕ್ಕೆ ಎಡೆಮಾಡಿಕೊಡುತ್ತದೆ. ಉದಾಹರಣೆಗೆ ವ್ಯಾಪಾರ, ಮತ್ತು ಹಣಕಾಸು ಮುಂತಾದವುಗಳ ಮೇಲೆ ಪರಿಣಾಮ ಬೀರುತ್ತದೆ. ಒಪ್ಪಿಕೊಳ್ಳದೆ ಇರುವ ಪಾಪಗಳು ದೆವ್ವಗಳ ಕಾರ್ಯಗಳು ನಮ್ಮಲ್ಲಿ ಜರುಗಲು ಎಡೆಮಾಡಿಕೊಡುತ್ತವೆ. ನಮ್ಮ ಜೀವಿತಗಳಲ್ಲಿ ಪಾಪಗಳನ್ನು ಒಪ್ಪಿಕೊಳ್ಳುವುದು, ಪಶ್ಚಾತ್ತಾಪಪಡುವುದು, ಬಿಟ್ಟುಬಿಡುವುದು ಬಹಳ ಪ್ರಾಮುಖ್ಯವಾಗಿದೆ, ನಮ್ಮ ಜೀವನದೊಳಕ್ಕೆ ಬರುವ ಪಾಪಗಳನ್ನು ಎದುರಿಸಿ ಜಯಹೊಂದುವುದು ನಮ್ಮ ಜವಬ್ದಾರಿಯಾಗಿದೆ. ನಾವು ದೆವ್ವಗಳ ಕಾರ್ಯವೈಖರಿಗೆ ಅವಕಾಶ  ಕೊಡಲೇಬಾರದು.

**''ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ, ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವುದು, ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು''** (ಆದಿಕಾಂಡ 4:7)

ಆದಿಕಾಂಡ 4:7 ರಲ್ಲಿ ದೇವರು ಕಾಯಿನನೊಂದಿಗೆ ಮಾತಾಡಿದನು. ಕಾಯಿನನು ಕೋಪಿಸಿಕೊಂಡು ತನ್ನ ಸಹೋದರನನ್ನು ಕೊಲ್ಲಬೇಕೆಂದು ತೀರ್ಮಾನಿಸಿದನು ಆತನು ಮಾಡಬೇಕೆಂದಿದ್ದ ಪಾಪದ ಕುರಿತು ದೇವರು ಎಚ್ಚರಿಸಿದನು ಮತ್ತು ನೀನು ಅದನ್ನು ವಶಮಾಡಿಕೋ ಎಂದು ಹೇಳಿದನು. ಆದರೆ ಕಾಯಿನನು ಪಾಪಕ್ಕೆ ದಾಸನಾಗಿ ಕೊಲೆಗಾರನಾದನು.

## ಗಾಯದ ಘಟನೆಗಳು ಮತ್ತು ಅನುಭವಗಳು

ಮಾನಸಿಕ ಭಾವಾತ್ಮಕ ಗಾಯಗಳು ನಕಾರಾತ್ಮಕ ಪರಿಣಾಮಗಳನ್ನುಂಟು ಮಾಡಿ, ನಮ್ಮ ಜೀವಿತದಲ್ಲಿ ಭಯದ ವಾತಾವರಣ ಸೃಷ್ಟಿಸಿ, ಅದು ಮುಂದಿನ ಸಂತತಿಯವರೆಗೂ ಮುಂದುವರೆಯುವಂತೆ ಮಾಡುತ್ತವೆ. ಉದಾಹರಣೆಗೆ - ಯಾರಾದರೂ ಒಬ್ಬನು ಕಾರು ಅಪಘಾತಕ್ಕೆ ಸಿಲುಕಿದರೆ, ಆತನಲ್ಲಿ ಭಾವನಾತ್ಮಕ ತಲ್ಲಣ ಉಂಟಾಗಿ, ವೈಯಕ್ತಿಕ ಜೀವನಕ್ಕೆ ''ಭಯದ ಆತ್ಮ'' ಕ್ಕೆ ಮಾರ್ಗ ಮಾಡಿಕೊಡುತ್ತದೆ ಅವನು ಪ್ರಯಾಣಮಾಡಲು ಭಯಪಡುತ್ತಾನೆ. ಮತ್ತು ಕಾರಿನ ಒಳಗೆ ಕುಳಿತುಕೊಳ್ಳುವುದರಲ್ಲೂ ಸುರಕ್ಷತೆಯಿಲ್ಲ ಎಂದು ಭಯಪಡುತ್ತಾನೆ. ಈ ಭಯವು ಅನಂತರದ ಅವನ ಸಂತತಿಗೂ ಮುಂದುವರೆಯುತ್ತದೆ, ಬೇರೆ ಕ್ಷೇತ್ರಗಳಿಗೂ ಭಯವು ಅಂಕುರಿಸುತ್ತದೆ. ಪ್ರಿಯವಾದವರನ್ನು ಕಳೆದುಕೊಳ್ಳುವುದು, ತೆಗಳಿಕೆ, ದುರಂತಘಟನೆಗಳು ಮುಂತಾದವು ಗಾಯವನ್ನುಂಟುಮಾಡುವ ಘಟನೆಗಳಾಗಿರುತ್ತವೆ. ಇದು ಸಂತತಿಯ ಬಂಧನಗಳಿಗೆ ಜನರನ್ನು ನಡಿಸುತ್ತವೆ.

## ಶಾಪಗಳು ಮತ್ತು ಮಾಟಮಂತ್ರ

ಶಾಪಗಳು ಮತ್ತು ಮಾಟಮಂತ್ರಗಳು, ನಮ್ಮ ಜೀವಿತಗಳಲ್ಲಿ ಸಂತತಿಯ ಬಂಧನಕ್ಕೊಳಗಾಗುವಂತೆ ಮಾಡುತ್ತವೆ. ಇವು ಮೂರು ಮಾರ್ಗಗಳಲ್ಲಿ ಕಾರ್ಯಾಚರಣೆಗೆ ಬರುತ್ತವೆ.

### *ಸ್ವಯಂ ಪ್ರೇರಿತ ದಂಡಿಸಿದ ಶಾಪಗಳು ಅಥವಾ ಆತ್ಮ -ದಂಡನೆಯ ಶಾಪಗಳು:*

ಗೊತ್ತಿಲ್ಲದೇ ನಮ್ಮ ಮಾತುಗಳು ಆತ್ಮದಂಡನೆಯ ಶಾಪಗಳಾಗುತ್ತವೆ.ನಾವು, ಅನೇಕ ವಿಷಯಗಳನ್ನು ಭಾವೋದ್ರೇಕದಿಂದಲೂ, ಕೋಪದಿಂದ, ದ್ವೇಷದಿಂದ, ನೋವಿನಿಂದ, ನಿರುತ್ಸಾಹದಿಂದಲೂ ಹೇಳುತ್ತೇವೆ. ನಮ್ಮ ಆತ್ಮ ದೇಹ, ನೋಟ, ಭಾವನೆಗಳಿಗೆ ವಿರುದ್ಧವಾಗಿ ವಿಷಯಗಳನ್ನು ಹೇಳುವುದಾದರೆ ಅದು ನಮ್ಮನ್ನು ಶಾಪಕ್ಕೆ ಗುರಿಮಾಡುತ್ತದೆ. ಅಂತಹ ಆತ್ಮದಂಡನೆ ಶಾಪಗಳು ನಮ್ಮನ್ನು ಜನರೊಂದಿಗೆ ಸೇರದಂತೆಯೂ ಸಂತೋಷವನ್ನು ಅನುಭವಿಸದಂತೆಯೂ ತಡೆಹಿಡಿಯುತ್ತವೆ ಉದಾರಣೆಗಳೆಂದರೆ

- ''ನಾನು, ನನ್ನ ತಂದೆ, ತಾಯಿಗಳಂತಿರುವುದಿಲ್ಲ'' (ಬಾಲ್ಯದ ಅಸಂತೋಷ ಘಟನೆಗಳನ್ನು ಮರುಕ್ರೋಢೀಕರಿಸಿದ ವ್ಯಕ್ತಿಯ ಮಾತು)

- ''ನನಗೆ ಮಕ್ಕಳೇ ಬೇಡ'' (ಶಾಲೆಯಲ್ಲಿ ಅಥವಾ ಸಭೆಯ ಮಕ್ಕಳೊಂದಿಗಿನ ಕಠಿಣ ಸಮಯವನ್ನು ನೆನಸಿಕೊಂಡು ಹೇಳುವುದು)
- ''ನಮ್ಮ ಮಕ್ಕಳು ಬಹಳ ಭಯಂಕರವಾದವರು'' (ತಂದೆ ತಾಯಿಗಳು ತಮ್ಮ ಮಕ್ಕಳು ಭಯಂಕರವಾದವರೆಂದು ಹೇಳುತ್ತಿದ್ದರೆ ಅವರು ಹಾಗೆಯೇ ಆಗುತ್ತಾರೆ)
- ''ನಾನು ಲೈಂಗಿಕ ಸಂತೋಷವನ್ನು ಪಡುವುದಿಲ್ಲ'' (ಲೈಂಗಿಕತೆಗೆ ಬಲಿಯಾದವರು ಮತ್ತು ದೈಹಿಕ ದುರುಪಯೋಗವಾದವರು)
- ''ನಾನು'' ಪುರುಷರನ್ನು ದ್ವೇಷಿಸುತ್ತೇನೆ (ಸ್ತ್ರೀಯರು)'' ನಾನು ಮತ್ತೊಂದು ಸಾರಿ ಬೇರೆ ಪುರುಷ ಅಥವಾ ಸ್ತ್ರೀಯೊಟ್ಟಿಗೆ ಆತ್ಮೀಯತೆ ಬೆಳೆಸುವುದಿಲ್ಲ'' (ಸಂಬಂಧಗಳನ್ನು ಮುರಿದುಕೊಂಡ ಮೇಲೆ)

### *ಹಿಂದಿನ ತಲೆಮಾರಿನಿಂದ ಬಂದ ಶಾಪಗಳು*

ಹಿಂದಿನ ತಲೆಮಾರಿನವರು ಬೇಕೆಂದೇ ತೆಗೆದುಕೊಂಡ ಶಾಪಗಳು ಹಿಂದಿನ ಸಂತತಿಯಿಂದ ಬಂದವುಗಳಾಗಿದ್ದು. ಪ್ರಾಕೃತ ತಲೆಮಾರುಗಳು ಅದರ ಪ್ರಭಾವಕ್ಕೆ ಒಳಗಾಗಿರುತ್ತವೆ.

**''ಜನರೆಲ್ಲಾ - ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ ಅಂದರು''.** (ಮತ್ತಾಯ 27:25).

ಆಂಗ್ಲ ಭಾಷೆಯಲ್ಲಿ ಇದು ''ಜನರೆಲ್ಲರೂ ಹೇಳಿದ್ದೇನೆಂದರೆ, ''ಆತನ ರಕ್ತವು, ನಮ್ಮ ಮತ್ತು ನಮ್ಮ ಮಕ್ಕಳ ಮೇಲಿರಲಿ'' ಎಂಬುದಾಗಿದೆ.

### *ವ್ಯಕ್ತಿಗಳ/ಕುಟುಂಬ ಸದಸ್ಯರುಗಳ ಮೇಲೆ ಮಾಡಿದ ಮಾಟ ಮಂತ್ರ/ ದಿಗ್ಬಂಧನಗಳು*

ವೈಯಕ್ತಿಕ ಅಥವಾ ಕುಟುಂಬ ಸದಸ್ಯರುಗಳ ಮೇಲೆ ಮಾಡಿಸಿದ ಮಾಟಮಂತ್ರಗಳು, ದಿಗ್ಬಂಧನಗಳು ತಲೆಮಾರುಗಳ ಬಂಧನಗಳಿಗೆ ಅವಕಾಶ ಮಾಡಿಕೊಡುತ್ತವೆ.

### ಕುಟುಂಬದ ಪೂರ್ವಿಕರ ಅಸಹ್ಯಕರವಾದ ಸಾಮುಗ್ರಿಗಳನ್ನು ಹೊಂದುವ ಬಯಕೆ

ಪ್ರತಿಯೊಂದು ಕುಟುಂಬದಲ್ಲಿ ವಂಶಪಾರಂಪರ್ಯವಾಗಿ ಬಂದ ಚರ ಆಸ್ತಿಯನ್ನು ಹೊಂದಲು ಪ್ರತಿಯೊಬ್ಬರು ತವಕಿಸುತ್ತಾರೆ ಅದು ಶಾಪವನ್ನು ತರುತ್ತದೆ, ಯಾಕೆಂದರೆ ಅವರೇನಾದರೂ ಅದನ್ನು ಸುಳ್ಳು ದೇವರುಗಳಿಗೂ, ಮಿಥ್ಯ ಆಚರಣೆಗಳಿಗೂ

ಸಮರ್ಪಣೆ ಮಾಡಿದ್ದರೆ, ಅಂತಹ ಯಾವುದೇ ವಂಶಪಾರಂಪರ್ಯ ವಸ್ತುವನ್ನು ತಂದು ಅಲಂಕರಿಸಿ ಮನೆಯಲ್ಲಿ ಇಟ್ಟುಕೊಂಡರೆ ಅದು ನಮ್ಮನ್ನು ಬಂಧನಕ್ಕೆ ನಡೆಸುತ್ತದೆ.

**"ಅವರು ದೇವರೆಂದು ಮಾಡಿಕೊಂಡ ಮರದ ವಿಗ್ರಹಗಳನ್ನು ನೀವು ಬೆಂಕಿಯಿಂದ ಸುಟ್ಟುಬಿಡಬೇಕು. ಆ ವಿಗ್ರಹಗಳ ಮೇಲಿರುವ ಬೆಳ್ಳಿ ಬಂಗಾರವನ್ನು ನೀವು ಆಶಿಸಬಾರದು: ಅದನ್ನು ತೆಗೆದುಕೊಂಡರೆ ಅದು ನಿಮಗೆ ಉರುಲಾಗುವದು, ಅದು ನಿಮ್ಮ ದೇವರಾದ ಯೆಹೋವನಿಗೆ ಹೇಯವಾದದ್ದು. ಅದು ಕೇವಲ ಯೆಹೋವನದಾಗುವದಕ್ಕೆ ನಾಶವಾಗತಕ್ಕದ್ದಾಗಿರುವದರಿಂದ ನೀವು ಅಂಥ ವಸ್ತುಗಳನ್ನು ಮನೆಯೊಳಕ್ಕೆ ತಂದು ಅದರಂತೆಯೇ ನಾಶಕ್ಕೆ ಗುರಿಯಾಗಬಾರದು ನೀವು ಅದನ್ನು ಅಸಹ್ಯಪಟ್ಟು ಮುಟ್ಟದಿರಬೇಕು"**
(ಧರ್ಮೋಪದೇಶಕಾಂಡ 7:25, 26)

## ಕುಟುಂಬಗಳು (ಪಿತೃಗಳು) ಚರ್ಚಿಸಿ ಮಾಡಿದ ತೀರ್ಮಾನಗಳು

ಪಿತೃಗಳು ಮಾಡಿದ ತೀರ್ಮಾನಗಳು ಬಹಳ ಪ್ರಾಮುಖ್ಯವಾದವು ಯಾಕೆಂದರೆ ಅವರು ಅವರ ಕುಟುಂಬಗಳ ಆತ್ಮಿಕ ತಲೆಗಳಾಗಿದ್ದು ಅವು ಅವರವರ ಕುಟುಂಬಗಳ ಆಧ್ಯಾತ್ಮಿಕ ತೀರ್ಮಾನಗಳನ್ನು ಪ್ರತಿಬಿಂಬಿಸುತ್ತವೆ, ಅನೇಕ ಬಾರಿ ನಮ್ಮ ಪೂರ್ವಿಕರ ಮಿಥ್ಯ ಆಚರಣೆಗಳು ಧಾರ್ಮಿಕ ಚರ್ಚೆಗಳ ತೀರ್ಮಾನದ ಪರಿಣಾಮದಿಂದ ಬಂಧನಗಳುಂಟಾಗುತ್ತವೆ. ಜ್ಯೋತಿಷ್ಯ ಹೇಳುವುವವರನ್ನು ಸಂಧಿಸುವುದು ಸಹ ಸಂತತಿಯ ಬಂಧನಗಳಿಗೆ ಎಡೆಮಾಡಿಕೊಡುತ್ತದೆ. ಜ್ಯೋತಿಷ್ಯದಲ್ಲಿ ಪಾಲುಗಾರಿಕೆ, ಹಸ್ತ ಓದುವುದು, ಜಾತಕ ನೋಡುವುದು, ಕೃತಕ ನಿದ್ರೆ, ಗುಪ್ತಭಾತೃವರ್ಗತ್ವ, ತಾಯಿತ ಹಾಕಿಕೊಳ್ಳುವುದು, ಜನನ ಕಲ್ಲುಗಳು, ಮರುಳುಗೊಳಿಸುವ ಆಭರಣ ಮುಂತಾದವುಗಳ ಕಾರ್ಯದ ಫಲವು, ನಮ್ಮ ಜೀವಿತ, ಮಕ್ಕಳ ಜೀವಿತಗಳಲ್ಲಿ ದೆವ್ವಗಳ ಕಾರ್ಯಗಳಿಗೆ ದಾರಿ ಮಾಡುತ್ತದೆ, ಅಲ್ಲದೆ ಅನಂತರದ ಸಂತತಿಗೂ ಇವುಗಳು ಮುಂದುವರೆಯುತ್ತವೆ.

ಶಾಪಗಳಿಗೆ ಕಾರಣಗಳಿವೆ. ಅವುಗಳು ಆಕಸ್ಮಿಕವಾಗಿ ಪ್ರವೇಶಿಸುವುದಿಲ್ಲ. ಬದಲಾಗಿ ಶಾಪದ ಹಿಂದೆ ಬಲವಾದ ಕಾರಣಗಳಿವೆ, ಶಾಪಗಳು ಹೇಗೆ ಕಾರ್ಯ ನಡೆಸುತ್ತವೆ ಎಂಬ ಗ್ರಹಿಕೆಯುಂಟಾದಾಗ ಅದರ ಮುನ್ನೆಚ್ಚರಿಕೆಯ ಕ್ರಮಗಳನ್ನು ಅಥವಾ ಅವುಗಳನ್ನು ತಪ್ಪಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

# 4

# ವೈಯಕ್ತಿಕ ಮತ್ತು ಕುಟುಂಬದ ಬಂಧನಗಳನ್ನು ಗುರ್ತಿಸುವುದು

**‘‘ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳು ಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು’’**. (ಯೋಹಾನ 10:10).

ನಾವು ಸಮೃದ್ಧಿಯಾದ ಜೀವಿತವನ್ನು ಪಡೆಯಬೇಕೆಂದು ದೇವರು ಬಯಸುತ್ತಾನೆ. ದೆವ್ವವು ಅದನ್ನು ಕದ್ದು, ಕೊಂದು ಹಾಳುಮಾಡುತ್ತದೆ.

ವಿವಿಧ ರೀತಿಯಲ್ಲಿ ಕುಟುಂಬಕ್ಕೆ ಪ್ರವೇಶಿಸುವ ಬಂಧನಗಳನ್ನು ಅರ್ಥಮಾಡಿಕೊಂಡ ಬಳಿಕ ನಮ್ಮ ಸ್ವಂತ ಜೀವಿತಗಳಲ್ಲಿ ಕುಟುಂಬಗಳಲ್ಲಿ ಅಂತಹ ತಲೆಮಾರಿನ ಬಂಧನಗಳ ಸೂಚನೆಗಳಿವೆಯೋ ಎಂಬುದನ್ನು ಅರಿತುಕೊಳ್ಳಬೇಕು. ಅಂತಹ ಯಾವುದಾದರೂ ವೈಯಕ್ತಿಕ ಮತ್ತು ತಲೆಮಾರಿನ ಬಂಧನಗಳಿದ್ದರೆ, ಅವುಗಳನ್ನು ಆತ್ಮಿಕ ಆಯುಧಗಳಿಂದ ಎದುರಿಸಿ ನಾಶಗೊಳಿಸಬೇಕು.

## ಯಾವಾಗಲೂ ಕಾರಣಗಳು ಮತ್ತು ಪರಿಣಾಮಗಳು ನೇರ ಸಂಬಂಧ ಹೊಂದಿರುವುದಿಲ್ಲ

ಕಾರಣ ಮತ್ತು ಪರಿಣಾಮಗಳು ಒಂದಕ್ಕೊಂದು ಸಂಬಂಧ ಹೊಂದಿರುವುದಿಲ್ಲ ಎಂದು ತಿಳಿಯಬೇಕು. ಉದಾಹರಣೆಗೆ. ಕೆಲಸದಲ್ಲಿ ಉಳಿದುಕೊಳ್ಳಲಾಗದ ವ್ಯಕ್ತಿಯಿದ್ದಾನೆ ಎಂದು ಭಾವಿಸುವ, ಆರು ತಿಂಗಳುಗಳಿಗೊಮ್ಮೆ ಆ ವ್ಯಕ್ತಿಯು ಹೊಸ ಹೊಸ ಜವಬ್ದಾರಿ ತೆಗೆದುಕೊಳ್ಳುವುದು ಸಾಧ್ಯವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಇದಕ್ಕೆ ಕಾರಣವೇನೆಂಬುದನ್ನು ಅರಿಯಬೇಕು. ಉದಾಹರಣೆಗೆ ನಾವು ಆತನು ಜನರನ್ನು ಹಗೆ ಮಾಡುವವನೆಂದು ಗುರ್ತಿಸಿದರೆ, ಖಂಡಿತವಾಗಿ ಆತನು ಕೆಲಸ ಮಾಡುವ ಜಾಗದಲ್ಲಿ ಜಗಳವನ್ನು ಮಾಡುವವನಾಗಿರುತ್ತಾನೆ. ಜೊತೆ ಕೆಲಸದವರೊಂದಿಗಿನ ಹಗೆತನ ಕಾರಣವಿರಬಹುದು, ಅದರ ಪರಿಣಾಮ ಆತನು ಕೆಲಸಕ್ಕೆ ಹೊಂದಿಕೊಳ್ಳಲು ಅಥವಾ ಒಂದು ಕೆಲಸದಲ್ಲಿ ಉಳಿಯಲು ಆಗುವುದಿಲ್ಲ. ಇದು ಒಂದು ದೌರ್ಜನ್ಯ

ಆತ್ಮವಾಗಿದ್ದು ಅವನಲ್ಲಿ ಜೊತೆಕೆಲಸದವರು, ಸುತ್ತಲಿರುವ ಜನರ ಸಂಪರ್ಕಕ್ಕೆ ಅಡ್ಡಿಮಾಡಿ ಹಗೆತನ ಬರುವಂತೆ ಕಾರಣವನ್ನುಂಟುಮಾಡುತ್ತದೆ.

ಮತ್ತೊಂದು ಉದಾಹರಣೆಯೆಂದರೆ ಒಂದು ಕುಟುಂಬದಲ್ಲಿ ತಲೆಮಾರಿನ ಬಂಧನಗಳು ಮತ್ತು ನಿಯಂತ್ರಿಸಲಾಗದ ಕೋಪದ ಪರಿಸ್ಥಿತಿಯಿದ್ದರೆ ಆ ಕುಟುಂಬದ ಯೌವನಸ್ಥನು ಮದುವೆಯಾಗಿ ಮಕ್ಕಳಾಗಿದ್ದರೂ, ಇಂತಹ ನಡವಳಿಕೆಗಳು ಆತನ ಮದುವೆಯನ್ನು ಮುರಿದು ವಿಚ್ಛೇದನದಲ್ಲಿ ಕೊನೆಗೊಳ್ಳುವಂತೆ ಮಾಡುತ್ತದೆ. ಇಲ್ಲಿ ಸಂತಂತಿಯ ಬಂಧನವಾದ, ಅಸ್ವಾಭಾವಿಕ ಕೋಪ ಇದಕ್ಕೆ ಕಾರಣ, ಆದರೆ ಅವರ ಮದುವೆಯನ್ನು ಮುರಿದುಹಾಕಿದ್ದು ಇದರ ಪರಿಣಾಮ. ನಾವು ಹೆಚ್ಚಿನ ಸಮಯ ತೆಗೆದುಕೊಂಡು ವೈಯಕ್ತಿಕ ಮತ್ತು ಸಂತತಿಯ ಬಂಧನಗಳನ್ನು ಗುರ್ತಿಸಬೇಕು. ನಮ್ಮ ಜೀವಿತಗಳಲ್ಲಿ, ಕುಟುಂಬಗಳಲ್ಲಿ ಅಂತಹ ಸಂತತಿಯ ಬಂಧನಗಳಿವೆಯೋ ಎಂಬುದನ್ನು ಪರೀಕ್ಷಿಸಿಕೊಳ್ಳೋಣ ಯಾರಾದರೂ ನಮ್ಮಲ್ಲಿ, ಕುಟುಂಬದಲ್ಲಿ ಸಂಬಂಧಿಕರ ತಲೆಮಾರಿನಲ್ಲಿ ಇಂತಹ ಬಂಧನಗಳಿಗೆ ಅಥವಾ ಕ್ರಮವಲ್ಲದ ನಡವಳಿಕೆಗಳಿಗೆ ತೊಂದರೆಗಳಿಗೆ ಸಿಲುಕಿ ಹೊರಬರಲಾರದ ಸ್ಥಿತಿಯಲ್ಲಿದ್ದಾರೋ ಎಂಬುದನ್ನು ಆಲೋಚಿಸಬೇಕು.

ಬಹುಶಃ ನಮ್ಮ ತಾತನ ಸಂತತಿಯಲ್ಲಿ ಅಕಾಲಿಕ ಮರಣಗಳಾಗಿರಬಹುದು. ನಮ್ಮ ಚಿಕ್ಕಪ್ಪನು ಸಹ ಯೌವ್ವನದಲ್ಲಿ ತೀರಿಹೋದರು. ನಮ್ಮ ಸಂತತಿಗೂ ಈ ರೀತಿಯಾಗಬಹುದೆಂಬ ಭಯದಲ್ಲಿ ನಾವು ಜೀವಿಸುತ್ತಿರಬಹುದು. ಇಂತಹವುಗಳೇನಾದರೂ ಇದ್ದರೆ, ಅವುಗಳು ಹಾದು ಬಂದ ಮಾರ್ಗ ಮುಚ್ಚಬೇಕು ಮತ್ತು ನಮ್ಮ ಮುಂದಿನ ಪೀಳಿಗೆಗೆ ಮುಂದುವರೆಯದಂತೆ ತಡೆಹಿಡಿಯಬೇಕು. ನಮ್ಮ ಜೀವಿತಗಳಲ್ಲಿ ಇಂತಹ ಬಂಧನಗಳಿಗೆ ಮಾರ್ಗ ಮಾಡಿ ಕೊಟ್ಟಿರುವ ಸಂಗತಿಗಳು ಇರುವ ಬಗ್ಗೆ ಅರಿವುಂಟಾದರೆ, ನಾವು ಪಶ್ಚಾತ್ತಾಪ ಪಡಬೇಕು, ಬಿಟ್ಟುಬಿಡಬೇಕು, ಮತ್ತು ಸ್ವತಂತ್ರವಾಗಿ ನಡೆಯಬೇಕು!

## ನಾವು ಸ್ವತಂತ್ರವಾಗಿರಬಹುದು!

ಸತ್ಯವು ನಮಗೆ ತಿಳಿದಿದ್ದರೆ ಅದು ನಮ್ಮನ್ನು ಸ್ವತಂತ್ರಗೊಳಿಸುತ್ತದೆ ಎಂಬುದು ಶುಭವರ್ತಮಾನ. ಯೇಸುಕ್ರಿಸ್ತನು ನಮ್ಮನ್ನು ಸ್ವತಂತ್ರಗೊಳಿಸುವಾತನು!

**''ಸತ್ಯವನ್ನು ತಿಳಿದುಕೊಳ್ಳುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವುದು. ಆದುದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವುದು''** (ಯೋಹಾನ 8:32,36)

# 5

# ಬಂಧನಗಳಿಂದ ಸ್ವತಂತ್ರವಾಗಿರುವುದು ಹೇಗೆ?

## ನಮ್ಮ ಸ್ವಾತಂತ್ರ್ಯವು ಶಿಲುಬೆಯ ಮೇಲೆ ದಕ್ಕಿದೆ

**‘‘ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ, ಆದಿಯಿಂದಲೂ ಸೈತಾನನು ಪಾಪ ಮಾಡುವವನಾಗಿದ್ದಾನಲ್ಲಾ ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು’’** (1ಯೋಹಾನ 3:8).

ನಮ್ಮ ಸ್ವತಂತ್ರವು ಶಿಲುಬೆಯ ಮೇಲೆ ಲಭಿಸಿದೆ. ಯೇಸುವು ಸೈತಾನನ ಎಲ್ಲಾ ಕೆಲಸಗಳನ್ನು ನಾಶಮಾಡಲು ಬಂದನು. ಯೇಸು ಈ ಲೋಕಕ್ಕೆ ಏಕೆ ಬರಬೇಕಾಯಿತು? ಯೇಸುವು ಹೊಸ ಧರ್ಮಕೊಡಲು, ಯೋಚಿಸಲು ಹೊಸ ತತ್ವಶಾಸ್ತ್ರ ಕೊಡಲು ಬರಲಿಲ್ಲ. ಬದಲಾಗಿ ಜನರ ಜೀವಿತದಲ್ಲಿನ ಸೈತಾನನ ಎಲ್ಲಾ ಕೆಲಸಗಳನ್ನು ಲಯ ಮಾಡಲು ಬಂದನು. ನಮ್ಮ ಜೀವಿತದಲ್ಲಿ ಅಂತಹ ಸೈತಾನನ ಕೆಲಸಗಳನ್ನು ತಾಳಿಕೊಳ್ಳುವ ಅವಶ್ಯಕತೆಯಿಲ್ಲ.

ಪ್ರಪಂಚದಲ್ಲಿ ಹೊಸ ತತ್ವಜ್ಞಾನಗಳನ್ನು ಆಲೋಚನೆಗಳನ್ನು ಮತ್ತು ಧರ್ಮಗಳನ್ನು ಕೊಡುವ ಜನರಿದ್ದಾರೆ. ಹೀಗಿದ್ದರೂ ‘‘ಸೈತಾನನ ಕೆಲಸಗಳನ್ನು ಲಯ ಮಾಡುತ್ತೇನೆ’’. ಎಂದು ಎದ್ದು ನಿಂತು ಹೇಳುವವರಿಲ್ಲ. ಯೇಸುಕ್ರಿಸ್ತನೊಬ್ಬನೇ ಇದನ್ನು ಮಾಡಲು ಸಾಧ್ಯ.

**‘‘ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ, ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ,’’** (ಇಬ್ರಿಯರಿಗೆ 2:14).

ಆತನ ಮರಣದಿಂದಲೇ ಮರಣದ ಮೇಲೆ ಅಧಿಕಾರವಿದ್ದ ಸೈತಾನನ್ನು ಅಡಗಿಸಿಬಿಟ್ಟನು. ಶಿಲುಬೆಯು ಅಪಜಯದ ಸ್ಥಳವಲ್ಲ, ಅದು ಇತಿಹಾಸವೇ ಗ್ರಹಿಸಲಾರದ ದೊಡ್ಡ ಜಯದ ಸ್ಥಳವಾಗಿದೆ. ಶಿಲುಬೆಯ ಮೇಲೆ ಯೇಸು ಕ್ರಿಸ್ತನು ಸೈತಾನನಿಗಿಂತ ಶ್ರೇಷ್ಟನಾಗಿದ್ದಾನೆ. ಸ್ವಹಿತಕ್ಕಾಗಿ ಮಾಡಲಿಲ್ಲ, ನಮಗಾಗಿ ಮತ್ತು ನಮ್ಮೆಲ್ಲರ ಮಧ್ಯಸ್ಥನಾಗಿ ನಮ್ಮ ಪರವಾಗಿ ಈ ಕಾರ್ಯ ಮಾಡಿದನು.

**''ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದ್ದಂತ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು. ಆತನು ದೊರೆತನಗಳನ್ನು ಅಧಿಕಾರಗಳನ್ನು ನಿರಾಯುಧರನ್ನಾಗಿ ಮಾಡಿ ಜಯೋತ್ಸವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವುಗಳನ್ನಾಗಿ ಮೆರೆಸುತ್ತಾ ತೋರಿಸಿದನು''** (ಕೊಲೊಸ್ಸೆ 2:14,15).

ದೊರೆತನ ಮತ್ತು ಅಧಿಕಾರ, ಸೈತಾನ ಅಥವಾ ದೆವ್ವಗಳಾಗಿವೆ. ಯೇಸುವು ಶಿಲುಬೆ ಮೇಲೆ ಅವುಗಳನ್ನು ನಿರಾಯುಧರನ್ನಾಗಿ ಮಾಡಿ ಜಯೋತ್ಸವ ಮಾಡಿದ್ದಾನೆ.

**''ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ. ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.''** (ಎಫೆಸದವರಿಗೆ 6:12)

ಯೇಸುವು ಸೈತಾನನ್ನು ಅವನ ಅಧಿಕಾರಗಳನ್ನು ತಂತ್ರೋಪಾಯಗಳನ್ನು ಎದುರಿಸಿದ್ದಾನೆ. ಸರ್ವರಿಗೂ ತೋರುವಂತೆ ಶಿಲುಬೆಯು ಮೇಲೆ ಕ್ರಿಸ್ತನು ಜಯಶಾಲಿಯಾಗಿ ಸೈತಾನನ ಅಧಿಕಾರ ಲಯಪಡಿಸಿ ಮೆರೆದಿದ್ದಾನೆ. ಅದೇ ಯೇಸುವು ಈ ದಿನ ನಮ್ಮನ್ನು ಎಲ್ಲಾ ರೀತಿಯ ದುರಾತ್ಮಗಳ ಬಂಧನಗಳಿಂದ ಬಿಡಿಸಿ ಸಂಪೂರ್ಣವಾಗಿ ಸ್ವತಂತ್ರಗೊಳಿಸುತ್ತಾನೆ.

## ನನಗೆ ಮತ್ತು ನಿಮಗೆ ಇದರ ಅರ್ಥವೇನು?

**''ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು''.** (ಕೊಲೊಸ್ಸೆಯವರಿಗೆ 1:13-14)

ಯೇಸುವು ನಮ್ಮನ್ನು ಅಂಧಕಾರ ದೊರೆತನದಿಂದ ಅಂದರೆ ದೆವ್ವಗಳ ಬಲದಿಂದ ಬಿಡಿಸಿದ್ದಾನೆ. ಯೇಸುಕ್ರಿಸ್ತನ ಮೇಲೆ ನಾವು ನಂಬಿಕೆಯಿಟ್ಟರೆ, ಆ ಕ್ಷಣದಿಂದಲೇ ನಮ್ಮ ಜೀವಿತಗಳ ಮೇಲೆ ಸೈತಾನನಿಗೆ ಯಾವುದೇ ಅಧಿಕಾರವಿಲ್ಲ ಯಾಕೆಂದರೆ ನಾವು ಬಿಡುಗಡೆ ಹೊಂದಿದವರು ಸ್ವತಂತ್ರದಲ್ಲಿರಿಸಲ್ಪಟ್ಟವರಾಗಿದ್ದೇವೆ. ಮತ್ತು ನಾವು ಬೇರೆ ರಾಜ್ಯಕ್ಕೆ ಸೇರಿದವರಾಗುತ್ತೇವೆ ಅಂದರೆ ಕ್ರಿಸ್ತನ ರಾಜ್ಯದ ನಾಗರಿಕರಾಗುತ್ತೇವೆ. ನಾವು ಸೈತಾನನ ರಾಜ್ಯದವರಲ್ಲ ಆತನಿಗೆ ನಮ್ಮ ಜೀವಿತಗಳು, ಆತ್ಮ, ಪ್ರಾಣ ಮತ್ತು ಶರೀರದ ಮೇಲೆ ಯಾವುದೇ ಅಧಿಕಾರವಿಲ್ಲ. ನಾವು ಸ್ಥಳ ಕೊಟ್ಟರೆ ಮಾತ್ರ ಸೈತಾನನು ಬರಲು ಸಾಧ್ಯ.

ದೇವರ ವಾಕ್ಯ ''ಸೈತಾನನಿಗೆ ಅವಕಾಶ ಕೊಡಬೇಡಿರಿ' ಎಂದು ಹೇಳುತ್ತದೆ. (ಎಫೆಸದವರಿಗೆ 4:27). ಬಾಗಿಲು ಮುಚ್ಚಿ ಇಡಿರಿ ನಿಮ್ಮ ಜೀವಿತಗಳಲ್ಲಿ ಸೈತಾನನಿಗೆ ಆಹ್ವಾನ ಕೊಡಬೇಡಿರಿ!

## ಕ್ರಿಸ್ತನ ಅಮೂಲ್ಯ ರಕ್ತದ ಅಧಿಕಾರ

**''ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ''** (1 ಪೇತ್ರನು 1:18,19).

ಪೇತ್ರನ ಪತ್ರಿಕೆಯು, ಮಧ್ಯ ಏಷ್ಯಾದ, ರೋಮನ್ ಪ್ರಾಂತ್ಯಗಳಲ್ಲಿ ಚದುರಿಸಲ್ಪಟ್ಟಿದ್ದ ಯೆಹೂದಿ ಮತ್ತು ಅನ್ಯ (ಗ್ರೀಕ್) ಕ್ರೈಸ್ತರನ್ನು ಅಂದರೆ ಇಬ್ಬರಿಂದಲೂ ಬೆರೆತ ಸಭೆಯನ್ನು ಸಂಭೋದಿಸಿ ಬರೆದುದಾಗಿದೆ. ಪೇತ್ರನು ಯೆಹೂದಿ ಮತ್ತು ಅನ್ಯ ಕ್ರೈಸ್ತರಿಗೆ ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ಬಿಡುಗಡೆಯಾಗಿದ್ದೀರಿ ಎಂದು ಹೇಳುತ್ತಾನೆ. ಅಂದರೆ ಈ ಬಿಡುಗಡೆಯ ಕಾರ್ಯದಿಂದ ವಿಗ್ರಹಾರಾಧಕರಿಂದ ಧರ್ಮಗಳಿಂದ ಮೂಢನಂಬಿಕೆಗಳು, ಸಾಂಪ್ರದಾಯಿಕ ಆಚರಣೆಗಳಿಂದಲೂ ಬಿಡುಗಡೆ ಹೊಂದಿದ್ದಾರೆಂದು ಪೇತ್ರನು ತಿಳಿಸಿದ್ದಾನೆ.

ಯೇಸುಕ್ರಿಸ್ತನ ರಕ್ತವು ಅನೇಕ ವಿಷಯಗಳನ್ನು ನಮ್ಮ ಜೀವಿತದಲ್ಲಿ ಮಾಡಿದೆ. ನಮ್ಮ ಪಾಪಗಳನ್ನು ತೊಳೆದಿದೆ ಸೈತಾನನ ಬಲಗಳಿಂದ ಬಿಡುಗಡೆ ಮಾಡಿದೆ. ನಮ್ಮ ಪೂರ್ವಿಕರ ಅಥವಾ ನಮ್ಮ ಪಿತೃಗಳ ಮೂಲಕ ಅವಕಾಶ ಕಲ್ಪಿಸಿದ ಸೈತಾನನ ಪ್ರಭಾವಗಳಿಂದಲೂ, ಕ್ರಿಸ್ತನ ರಕ್ತವು ನಮ್ಮನ್ನು ಸ್ವತಂತ್ರಗೊಳಿಸಿದೆ! ಕ್ರಿಸ್ತನು ಸುರಿಸಿದ ರಕ್ತವು ನಮ್ಮನ್ನು ಸೈತಾನನ ಬಂಧನಗಳಾದ ಪಾಪಭರಿತ ಜೀವನಕ್ರಮ ದೈವಿಕವಲ್ಲದ ನಡವಳಿಕೆಗಳು, ಸಮರ್ಪಣೆಗಳು ಮತ್ತು ನಮ್ಮ ಪೂರ್ವಿಕರ ಶಾಪಗಳಿಂದ ಬಿಡುಗಡೆಗೊಳಿಸಿ ನಮ್ಮನ್ನು ಸ್ವತಂತ್ರದಲ್ಲಿರಿಸಿದೆ!

## ಸೆರೆಮನೆ ಬಾಗಿಲು ತೆರೆದಿದೆ - ನಾವು ಸ್ವಾತಂತ್ರ್ಯದೆಡೆಗೆ ನಡೆಯಬೇಕು

ಸೆರೆಮನೆ ಬಾಗಿಲು ತೆರೆದಿದೆ ಆದರೆ ನಾವು ಸ್ವತಂತ್ರದ ಕಡೆಗೆ ನಡೆಯಬೇಕು. ಕ್ರಿಸ್ತನು ನಮಗೆ ಮಾಡಬೇಕಾದ ಎಲ್ಲಾ ಕೆಲಸಗಳನ್ನು ನಮಗಾಗಿ ಮಾಡಿದ್ದಾನೆ. ಸ್ವತಂತ್ರಗೊಳಿಸಿದ್ದಾನೆ. ರಕ್ತ ಸುರಿಸಿದ್ದಾನೆ ಸೈತಾನನ ತಂತ್ರೋಪಾಯಗಳನ್ನು,

ಕೆಲಸಗಳನ್ನು ನಶಿಸಿಹಾಕಿ ನಾಶ ಪಡಿಸಿದ್ದಾನೆ. ಆದರೆ ನಾವು ತೆರೆದ ಬಾಗಿಲನ್ನು ಪ್ರವೇಶಿಸಿ ಕೊಟ್ಟಂತಹ ಸ್ವತಂತ್ರವನ್ನು ಅಂಗೀಕರಿಸಿ, ಪಡೆದುಕೊಂಡು ನಡೆಯಬೇಕು. ''ಸತ್ಯವನ್ನು ತಿಳಿದುಕೊಳ್ಳುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು. ಆದುದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವುದು. ಎಂದು ಯೇಸು ಹೇಳಿದ್ದಾನೆ. (ಯೋಹಾನ 8: 32,36). ಅಜ್ಞಾನ ನಮ್ಮನ್ನು ಬಂಧನದಲ್ಲಿಡುತ್ತದೆ. ಆದರೆ ಸತ್ಯವನ್ನು ತಿಳಿದುಕೊಂಡರೆ ಸ್ವತಂತ್ರವಾಗಿ ನಡೆಯಲು ಅವಕಾಶ ಕಲ್ಪಿಸುತ್ತದೆ.

## ನೀವು ಆಶೀರ್ವದಿಸಲ್ಪಟ್ಟವರು!

**''ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ''** (ಎಫೆಸದವರಿಗೆ 1:3).

ದೇವರು ನಿನ್ನನ್ನು ಪರಲೋಕದ ಎಲ್ಲಾ ಆಶೀರ್ವಾದಗಳಿಂದ ತುಂಬಿಸಿದ್ದಾನೆ. ಪರಲೋಕದ ಎಲ್ಲಾ ಆತ್ಮಿಕ ಆಶೀರ್ವಾದಗಳು ನಿಮ್ಮವೇ. ನೀವು ಆಶೀರ್ವದಿಸಲ್ಪಡಬೇಕೆಂಬುದೇ ಆತನ ಆಶೆ! ದೇವರು ನಿಮ್ಮ ವಿರೋಧವಾಗಿರದೆ ಪರವಾಗಿಯೇ ಇದ್ದಾನೆ.

## ಶಾಶ್ವತವಾಗಿ ಎಲ್ಲಾ ಬಾಗಿಲುಗಳನ್ನು ಮುಚ್ಚಿರಿ

**''ದೆವ್ವವು ಮನುಷ್ಯನನ್ನು ಬಿಟ್ಟು ಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ ತಿರುಗಾಡುತ್ತದೆ. ವಿಶ್ರಾಂತಿ ಸಿಕ್ಕದ ಕಾರಣ ಅದು ನಾನು ಬಿಟ್ಟು ಬಂದ ನನ್ನ ಮನೆಗೆ ತಿರಿಗಿ ಹೋಗುತ್ತೇನೆ ಅಂದುಕೊಂಡು ಬಂದು ಆ ಮನೆ ಒಕ್ಕಲಿಲ್ಲದ್ದೂ ಗುಡಿಸಿ ಅಲಂಕರಿಸಿದ್ದೂ ಆಗಿರವುದನ್ನು ಕಂಡು ಹೊರಟು ಹೋಗಿ ತನಗಿಂತ ಕೆಟ್ಟವುಗಳಾದ ಬೇರೆ ಏಳು ದೆವ್ವಗಳನ್ನು ತನ್ನೊಂದಿಗೆ ಕರಕೊಂಡು ಬರುವುದು ಅವು ಒಳಹೊಕ್ಕು ಅಲ್ಲಿ ವಾಸಮಾಡುವವು. ಆಗ ಆ ಮನುಷ್ಯನ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವುದು. ಇದರಂತೆಯೇ ಈ ಕೆಟ್ಟ ಸಂತತಿಗೆ ಆಗುವುದು ಅಂದನು''**. (ಮತ್ತಾಯ 12:43-45).

ಯೇಸುವು ಸೈತಾನನು ಯಾವ ರೀತಿ ಕೆಲಸ ಮಾಡುತ್ತಾನೆ ಎಂಬುದರ ಪರಿಜ್ಞಾನ ಕೊಡುತ್ತಿದ್ದಾನೆ. ದೆವ್ವಗಳು ಆವರಿಸಿಕೊಂಡಿದ್ದ ಸ್ಥಳವನ್ನು ಬಿಟ್ಟು ಹೋದರೂ, ತಿರುಗಿ ಬರುವ ಪ್ರಯತ್ನ ಮಾಡುತ್ತವೆ. ಅದಕ್ಕಾಗಿ ಬಾಗಿಲುಗಳನ್ನು ಮುಚ್ಚಿರುವುದು ಅವಶ್ಯಕ.

ಉದಾಹರಣೆಗೆ, ಯಾರಾದರೂ ಅಶ್ಲೀಲತೆಗೆ ಅವಕಾಶ ಕಲ್ಪಿಸಿ, ಪಶ್ಚಾತ್ತಾಪದಿಂದ ಬಂಧನ ಮುರಿಯುತ್ತೇನೆಂದು ತೀರ್ಮಾನಿಸಿ, ಬಾಗಿಲುಗಳನ್ನು ಶಾಶ್ವತವಾಗಿ ಮುಚ್ಚದೆ, ತಿರುಗಿ ಅಂತಹ ಅಶ್ಲೀಲ ವಿಷಯಗಳಲ್ಲಿ ಸ್ವಲ್ಪ ತೊಡಗಿಸಿಕೊಂಡರೂ ಮೊದಲಿದ್ದ ಸ್ಥಿತಿಗಿಂತ, ಈ ಸ್ಥಿತಿ ಕೆಟ್ಟದಾಗುತ್ತದೆ. ಇದು ಯಾಕಾಗುತ್ತದೆಂದರೆ, ವೈರಿಯು ತಿರಿಗಿ ಬಂದದ್ದಕ್ಕಾಗಿ. ಇಂತಹ ಸಮಯಗಳಲ್ಲಿ ಸೈತಾನನು ತೀವ್ರತೆಯಿಂದ ತಿರಿಗಿ ಬರುತ್ತಾನೆ. ನೀನು ಸೈತಾನನು ಬಂಧಿಸಿದ ವಿಷಯದಿಂದ ಅವನನ್ನು ಹೊರಗೆ ಹಾಕಲು ತೀರ್ಮಾನಿಸಿ, ನಿರಾಕರಿಸಿದರೆ ಸೈತಾನನು ತಿರಿಗಿ ಮಹಾ ತೀವ್ರತೆಯಿಂದ ಆಕ್ರಮಿಸುತ್ತಾನೆ. ನಾವೇನಾದರೂ ಪೂರ್ಣವಾಗಿ ಪಾಪ ವಿಮೋಚನೆ ಮಾಡಿಕೊಳ್ಳದಿದ್ದರೆ, ಪಶ್ಚಾತಾಪವಿಲ್ಲದೆ ಪಾಪ ಮಾಡುವುದರಲ್ಲಿ ಮುಂದುವರೆಯುತ್ತಿದ್ದರೆ ಸೈತಾನನು ತಿರಿಗಿ ನಮ್ಮ ಬಳಿಗೆ ಬರಲು ಅವಕಾಶವಿದೆ. ನಮ್ಮ ಜೀವಿತಗಳಲ್ಲಿ ಸೈತಾನನ ಕೆಲಸಗಳಿಗೆ ಸ್ಥಳಕೊಟ್ಟ ಎಲ್ಲಾ ಬಾಗಿಲುಗಳನ್ನು ಶಾಶ್ವತವಾಗಿ ಮುಚ್ಚಬೇಕು.

## ನಮ್ಮ ಸ್ವಂತಪಾಪಗಳಿಗೆ ಮತ್ತು ನಮ್ಮ ಪಿತೃಗಳ ಪಾಪಗಳಿಗೆ ಪಶ್ಚಾತ್ತಾಪ ಪಡುವುದು ಮತ್ತು ಅವುಗಳನ್ನು ತಿರಸ್ಕರಿಸುವುದು

**''ನಿಮ್ಮಲ್ಲಿ ಉಳಿದವರು ತಮ್ಮ ಪಾಪದ ದೆಸೆಯಿಂದಲೂ ತಮ್ಮ ಪಿತೃಗಳ ಪಾಪದ ದೆಸೆಯಿಂದಲೂ ಅವರಂತೆಯೇ ಶತ್ರುಗಳ ದೇಶಗಳಲ್ಲಿ ಕ್ಷೀಣವಾಗಿ ಹೋಗುವರು. ಆದರೆ ಅವರು ತಾವೂ ತಮ್ಮ ಪಿತೃಗಳೂ ನನಗೆ ದ್ರೋಹಿಗಳಾಗಿ ಪಾಪಮಾಡಿದವರೆಂದೂ ತಾವು ನನಗೆ ವಿರೋಧವಾಗಿ ನಡೆದದ್ದರಿಂದಲೇ ನಾನು ತಮಗೆ ವಿರೋಧವಾಗಿ ನಡೆದುಕೊಂಡು ಶತ್ರು ದೇಶಕ್ಕೆ (ಸೆರೆಯವರನ್ನಾಗಿ) ಬರಮಾಡಬೇಕಾಯಿತೆಂದೂ ಒಪ್ಪಿ ತಮ್ಮ ಮೊಂಡವಾದ ಮನಸ್ಸನ್ನು ನನ್ನ ಆಜ್ಞೆಗೆ ಒಳಪಡಿಸಿ, ತಮ್ಮ ಪಾಪದಿಂದುಂಟಾದ ಶಿಕ್ಷೆಯನ್ನು ಸ್ವೀಕರಿಸುವದಾದರೆ ನಾನು ಯಾಕೋಬ್ ಇಸಾಕ್ ಅಬ್ರಹಾಮ್ ಇವರಿಗೆ ಮಾಡಿದ ವಾಗ್ದಾನಗಳನ್ನು ನೆನಪಿಗೆ ತಂದುಕೊಂಡು ನೆರವೇರಿಸುವೆನು, ಅವರ ಸ್ವದೇಶವನ್ನೂ ನಾನು ದಯೆಯಿಂದ ಜ್ಞಾಪಿಸಿಕೊಳ್ಳುವೆನು''** (ಯಾಜಕಕಾಂಡ 26:39-42).

ಇಲ್ಲಿ ದೇವರು ಪ್ರಸಕ್ತ ಸಂತತಿಯು ತಮ್ಮ ಹಿಂದಿನ ಸಂತತಿಯವರ ಪಾಪಗಳಿಗೆ ಪಶ್ಚಾತ್ತಾಪ ಪಡಬೇಕೆಂದು ಹೇಳುತ್ತಾನೆ. ನಾವು ಸತ್ಯವೇದದ ಬೇರೆ ಉದಾಹರಣೆ ಕೂಡ ನೋಡುತ್ತೇವೆ.

**''ಯೆಹೋವನೇ, ನಮ್ಮ ದುಷ್ಟತನವನ್ನು ನಮ್ಮ ಪಿತೃಗಳ ದುರಾಚಾರವನ್ನೂ ತಿಳಿದುಕೊಂಡಿದ್ದೇವೆ, ನಿನಗೆ ಪಾಪಮಾಡಿದ್ದೇವಲ್ಲ.** (ಯೆರೆಮಿಯಾ 14:20)

ಎಜ್ರ, ನೆಹೆಮಿಯಾ ಮತ್ತು ದಾನಿಯೇಲರು ಸಹ ತಮ್ಮ ಪಿತೃಗಳು ಮಾಡಿದ ಪಾಪಗಳಿಗೆ ಪಶ್ಚಾತ್ತಾಪ ಪಟ್ಟರು. ನಾವು ಸಹ ನಮ್ಮ ತಂದೆಗಳ ಮತ್ತು ಪೂರ್ವಿಕರ ಪಾಪಗಳಿಗೆ ಆತ್ಮಿಕವಾಗಿ ಪ್ರಾರ್ಥಿಸಿ ಪಶ್ಚಾತ್ತಾಪ ಪಡಬೇಕು.

## ದೇವ ನಿಯಮಿತ ಅಧಿಕಾರದ ರಚನೆ

ಪ್ರಾಕೃತ ಪ್ರಪಂಚದಲ್ಲಿ ದೇವರು ಅಧಿಕಾರ ರಚನೆಯನ್ನು ನಿಯೋಜಿಸಿದ್ದಾನೆ ಇದನ್ನು ದೆವ್ವವು ಗೌರವಿಸುತ್ತದೆ.

## ಗಂಡನ/ತಂದೆಯ ಅಧಿಕಾರ

**''ನೀವು ತಿಳಿಯಬೇಕೆಂದು ನನ್ನ ಇಷ್ಟ, ಅದೇನೆಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ''**.(1ಕೊರಿಂಥದವರಿಗೆ 11:3).

ಹೆಂಡತಿಗೆ, ಗಂಡನೇ ತಲೆಯಾಗಿದ್ದಾನೆ. ಗಂಡ/ತಂದೆಯು ಆತನ ಕುಟುಂಬದ ಆತ್ಮಿಕ ಬಾಗಿಲು ಕಾಯುವವನಾಗಿರುತ್ತಾನೆ. ಆತ್ಮಿಕ ಅಧಿಕಾರವು, ದೇವರು ರಚಿಸಿ ಇಟ್ಟಂತಹ ಅಧಿಕಾರದೊಂದಿಗೆ ಮುಂದುವರೆಯುತ್ತದೆ. ವೈರಿಯನ್ನು ಮನೆಯೊಳಗೆ ಆಹ್ವಾನಿಸುವುದು, ಆಹ್ವಾನಿಸದಿರುವುದು ಗಂಡನಿಗೆ ಬಿಟ್ಟ ವಿಷಯವಾಗಿದೆ. ಅವನಿಗೆ ತನ್ನ ಹೆಂಡತಿ ಮತ್ತು ಕುಟುಂಬವನ್ನು ಜವಾಬ್ದಾರಿಯಿಂದ ರಕ್ಷಿಸುವ ಅಧಿಕಾರವಿದೆ. ಗಂಡಂದಿರು, ತಮ್ಮ ಹೆಂಡತಿಯರು ಮತ್ತು ಮಕ್ಕಳ ಮೇಲೆ ಪ್ರಭಾವವನ್ನುಂಟು ಮಾಡುವ ದೆವ್ವಗಳ ಅಧಿಕಾರವನ್ನು ಮುರಿಯುವ ಅಥವಾ ಅವಕಾಶಕೊಡದೇ ಬಾಗಿಲುಗಳನ್ನು ಮುಚ್ಚುವ ಅಧಿಕಾರವನ್ನು ತೆಗೆದುಕೊಳ್ಳಬೇಕು.

## ಒಬ್ಬ ವಿಶ್ವಾಸಿಯಾದ ಹೆಂಡತಿ/ಪೋಷಕರ ಅಧಿಕಾರ

**''ಯಾಕೆಂದರೆ ಕ್ರಿಸ್ತನಂಬಿಕೆಯಿಲ್ಲದ ಗಂಡನು ತನ್ನ ಹೆಂಡತಿಯಲ್ಲಿ ದೇವಜನಕ್ಕೆ ಸಂಬಂಧಪಟ್ಟವನಾದನು, ಮತ್ತು ಕ್ರಿಸ್ತ ನಂಬಿಕೆಯಿಲ್ಲದ ಹೆಂಡತಿಯು ನಮ್ಮ ಸಹೋದರನಾದ ತನ್ನ ಗಂಡನಲ್ಲಿ ದೇವಜನಕ್ಕೆ ಸಂಬಂಧಪಟ್ಟವಳಾದಳು. ಹಾಗಲ್ಲದಿದ್ದರೆ ನಿಮ್ಮ ಮಕ್ಕಳು ಅಪವಿತ್ರರಾಗುತ್ತಿದ್ದರು''**. (1ಕೊರಿಂಥದವರಿಗೆ 7:14).

ಹೀಗೆ ಹೆಂಡತಿ/ಗಂಡ ಕ್ರಿಸ್ತ ನಂಬಿಕೆಯಿಲ್ಲದಿದ್ದರೆ, ನಂಬಿಕೆಯಿರುವ ಗಂಡನು, ಹೆಂಡತಿಯು, ಅವಿಶ್ವಾಸಿಯಾದವರ ಮೇಲೆ ಆತ್ಮಿಕ ವಿಷಯುಗಳಿಂದ ಪ್ರಭಾವಿತಗೊಳ್ಳುವಂತೆಯೂ ನಂಬಿಕೆಗೆ ಬರುವಂತೆಯೂ ಮಾಡಬೇಕು. ನೀನು

ವಿಶ್ವಾಸಿಯಾಗಿದ್ದರೆ (ಕ್ರಿಸ್ತ ನಂಬಿಕೆಯುಳ್ಳವರಾಗಿದ್ದರೆ) ನಂಬಿಕೆಯಿಲ್ಲದ ನಿನ್ನ ಹೆಂಡತಿಯೊಂದಿಗೆ ನಿನ್ನ ಪ್ರಬಲ ನಂಬಿಕೆಯ ವ್ಯತ್ಯಾಸವನ್ನು ಅರ್ಥೈಸಬಹುದು. ಮಕ್ಕಳು ಸಹ ಕ್ರಿಸ್ತ ನಂಬಿಕೆಯ ಹೆಂಡತಿಯ/ಗಂಡನ ಆತ್ಮಿಕ ಪ್ರಭಾವಕ್ಕೆ ಸಂಬಂಧಪಡುತ್ತಾರೆ.

## ಪ್ರಸಕ್ತ ಸಂತತಿಯ ಅಧಿಕಾರ

ಯಾಜಕ ಕಾಂಡ 26: 39-42 ರಲ್ಲಿ ಸೂಚಿಸಿರುವಂತೆ ನಾವು ನಮ್ಮ ಕುಟುಂಬವೃಕ್ಷದ ಪ್ರಸಕ್ತ ಜನರಾಗಿರುವುದರಿಂದ, ಪೂರ್ವಿಕರು ಮಾಡಿದ ಹರಕೆಗಳು ಸಮರ್ಪಣೆಗಳು, ಮಾಡಿಕೊಂಡ ಒಪ್ಪಂದಗಳ ಮೇಲೆ ಅಧಿಕಾರ ಹೊಂದಿದವರಾಗಿದ್ದೇವೆ.

- ನಮ್ಮ ಸ್ವಾತಂತ್ರ್ಯವು ಶಿಲುಬೆಯ ಮೇಲೆ ಧಕ್ಕಿದೆ.
- ಯೇಸುವು ಜನರ ಜೀವಿತಗಳಲ್ಲಿರುವ ಎಲ್ಲಾ ಸೈತಾನನ ಕೆಲಸಗಳನ್ನು ಲಯಪಡಿಸಲು ಬಂದನು.
- ಯೇಸು ಕ್ರಿಸ್ತನ ರಕ್ತವು ನಮ್ಮನ್ನು ಬಿಡುಗಡೆ ಮಾಡುತ್ತದೆ.
- ಸೆರೆಮನೆ ಬಾಗಿಲು ತೆರೆದಿದೆ, ನಾವು ಸ್ವತಂತ್ರದೆಡೆಗೆ ನೆಡೆಯಬೇಕು.
- ದೇವರು, ನಮ್ಮನ್ನು ಪರಲೋಕದ ಎಲ್ಲಾ ಆಶೀರ್ವಾದಗಳಿಂದ ಆಶೀರ್ವದಿಸಿದ್ದಾನೆ.
- ಸೈತಾನನಿಗೆ ನಮ್ಮ ಜೀವಿತಗಳಲ್ಲಿ ಕೆಲಸಮಾಡಲು ಅವಕಾಶ ಮಾಡಿಕೊಡುವ ಎಲ್ಲಾ ಬಾಗಿಲುಗಳನ್ನು ಶಾಶ್ವತವಾಗಿ ಮುಚ್ಚಬೇಕು.
- ನಮ್ಮ ತಂದೆಗಳ ಮತ್ತು ಪೂರ್ವಜರ ಪಾಪಗಳಿಗೆ ಪ್ರಾರ್ಥಿಸುವುದು, ಮತ್ತು ಪಶ್ಚಾತ್ತಾಪ ಪಡುವುದು ಸತ್ಯವೇದಕ್ಕೆ ಅನುಸಾರವಾಗಿದೆ.
- ಪ್ರಕೃತಿಯಲ್ಲಿ ದೇವರು ರಚಿಸಿ, ನೇಮಿಸಿದ ಒಂದು ಅಧಿಕಾರವಿದೆ. ಸೈತಾನನು ಮನ್ನಣೆ ಕೊಡುವ ಸಂಗತಿಗಳ ಮೂಲಕ ಪ್ರಾಕೃತ ಪ್ರಪಂಚದಲ್ಲಿ ದೇವರು ಕಾರ್ಯ ಮಾಡುತ್ತಾನೆ.

# ಮೇಲಿಂದ ಮೇಲೆ ಕೇಳುವ ಪ್ರಶ್ನೆಗಳು

**ಪ್ರಶ್ನೆ 1: ನಾನು ಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡಾಗ, ಆತನ ರಕ್ತವು ನನ್ನ ಪಾಪಗಳನ್ನು ತೊಳೆದಿದೆ ಎಂದು ಒಪ್ಪಿಕೊಂಡಿದ್ದೇನೆ. ಯಾಕೆ ಇನ್ನು ನಮ್ಮ ಪೂರ್ವಜರ ಅಪರಾಧದ ಕೆಳಗಿದ್ದೇವೆ? ಕ್ರಿಸ್ತನ ರಕ್ತವು ದುಷ್ಟಕಾರ್ಯಗಳನ್ನು ಶುದ್ಧೀಕರಿಸಲಿಲ್ಲವೋ? ಕರ್ತನು ನನ್ನನ್ನು ಸ್ವತಂತ್ರಗೊಳಿಸುವ ಕಾರ್ಯ ಆತನ ಬಿಡುಗಡೆ ಕಾರ್ಯದಲ್ಲಿಲ್ಲವೊ? ಯಾಕೆ ನಾನು ''ತಲೆಮಾರಿನ ಬಂಧನಗಳಿಗೆ ನಿಶ್ಚಿತವಾಗಿ ವ್ಯವಹರಿಸಬೇಕು?**

ಉತ್ತರ: ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ನಾವು ಅಂಗೀಕರಿಸಿಕೊಂಡಾಗ, ನಾವು ಆತ್ಮದಲ್ಲಿ ಹೊಸದಾಗಿ ಜನಿಸಿ ಹೊಸ ಸೃಷ್ಟಿಗಳಾಗುತ್ತೇವೆ. ಕ್ರಿಸ್ತನ ರಕ್ತವು ನಮ್ಮ ಪಾಪಗಳನ್ನು ತೊಳೆದು ಬಿಡುತ್ತದೆ. ಹೀಗಿದ್ದರೂ ನಮ್ಮ ಪೂರ್ವಿಕರು ದೆವ್ವಗಳ ಕೆಲಸಗಳಿಗೆ ಅವಕಾಶ ಕಲ್ಪಿಸಿ, ಅವರ ದುಷ್ಟತನದ ಬಂಧನಗಳಿಗೆ ಒಳಗಾಗಿದ್ದರೆ ಅವು ನಮ್ಮ ಜೀವನದ ಅನುಭವಗಳು, ನಮ್ಮ ಶರೀರದ ಭಾವನೆಗಳು, ಚಿತ್ತ, ಮನಸ್ಸು, ಆತ್ಮಗಳ ಮೇಲೆ ಪರಿಣಾಮ ಬೀರುತ್ತವೆ. ದೇವರು ನಮ್ಮನ್ನು ರಕ್ಷಿಸುತ್ತಾನೆ ಮತ್ತು ಕ್ರಿಸ್ತನ ರಕ್ತವು ನಮ್ಮನ್ನು ತೊಳೆಯುತ್ತದೆ ನಿಜ. ಆದರೆ ಆತನು ನಮ್ಮ ಆತ್ಮ, ಶರೀರ, ನಮ್ಮ ಪರಿಸ್ಥಿತಿಗಳನ್ನು ಬದಲಾಯಿಸುವುದಿಲ್ಲ.

ಉದಾಹರಣೆಗೆ, ಕ್ರಿಸ್ತನನ್ನು ಅಂಗೀಕರಿಸುವಾಗ ನಿಮ್ಮ ಕೂದಲು ಬಿಳಿಯಾಗುತ್ತಿದ್ದರೆ, ಅಥವಾ ನರೆಬಂದಿದ್ದರೆ, ಅದು ಅದೇ ರೀತಿಯಾಗಿ ಅನಂತರವೂ ಮುಂದುವರೆಯುತ್ತದೆ ಅಥವಾ ನೀವು ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟುವುದಕ್ಕೆ ಮೊದಲು ಆರು ಅಡಿ ಎತ್ತರವಿದ್ದರೆ, ನೀವು ಕ್ರಿಸ್ತನನ್ನು ಅಂಗೀಕರಿಸಿದ ಬಳಿಕವೂ ಅದೇ ಎತ್ತರವಿರುತ್ತೀರಿ. ನೀವು ಆತ್ಮನಲ್ಲಿ ಹೊಸ ಸೃಷ್ಟಿಯಾಗಿ ಕಂಡುಬಂದರೂ, ಅನೇಕ ಬಂಧನಗಳು, ಪ್ರಾಣ, ಶರೀರ ಮತ್ತು ಜೀವನ ಪರಿಸ್ಥಿತಿಗಳಲ್ಲಿ ಕಾಣಿಸಿಕೊಳ್ಳುತ್ತಿದೆ.

ಅನೇಕ ವಿಶ್ವಾಸಿಗಳು ದೇವರ ದೃಷ್ಟಿಯಲ್ಲಿ ತೊಳೆಯಲ್ಪಟ್ಟು ನೀತಿವಂತರಾಗಿ ಕಾಣಿಸಿಕೊಂಡಾಗಲೂ, ಅವರು ಪಾಪಮಯ ಸ್ವಭಾವಗಳು ಭಾವನಾತ್ಮಕ ತೊಂದರೆಗಳಿಂದ ಇನ್ನೂ ನರಳುತ್ತಿದ್ದಾರೆ. ಆದುದರಿಂದ ''ತಲೆಮಾರಿನ ಬಂಧನ'' ಗಳನ್ನು ಗುರ್ತಿಸಿ, ಸ್ಪಂದಿಸುವುದು ಮುಖ್ಯ ವಿಷಯವಾಗಿದೆ.

**ಪ್ರಶ್ನೆ 2 : ವಿಮೋಚನಕಾಂಡ 20:5,6 ರ ಪ್ರಕಾರ ದೇವರು, ಆತನನ್ನು ದ್ವೇಷಿಸಿದವರ ದುಷ್ಕೃತನವನ್ನು ಸಂಧಿಸುತ್ತಾನೆ. ಮತ್ತು ಆತನನ್ನು ಪ್ರೀತಿಸುವವರಿಗೆ ದಯೆ ತೋರಿಸುತ್ತಾನೆ. ನಾನು ದೇವರನ್ನು ದ್ವೇಷಿಸುವುದಿಲ್ಲ ಬದಲಾಗಿ ಆತನನ್ನು ಪ್ರೀತಿಸುತ್ತೇನೆ. ಆದಾಗ್ಯೂ ನಾನು ಕುಟುಂಬದ ಬಂಧನಗಳನ್ನು ಮುರಿಯುವುದಕ್ಕೆ ಕಾಳಜಿ ವಹಿಸುವುದೇಕೆ?**

ಉತ್ತರ : ಈ ಪ್ರಶ್ನೆಗೆ ಉತ್ತರ ಮೊದಲ ಉತ್ತರದಂತೆಯೇ ಇದೆ ನಾವು ಪೂರ್ಣ ಹೃದಯದಿಂದ ದೇವರನ್ನು ಪ್ರೀತಿಸುತ್ತೇವೆ, ಆದರೂ ಸಹ ನಮ್ಮ ಪ್ರಾಣ ಮತ್ತು ಶರೀರವು, ಕೆಲವು ಬಂಧನಗಳಲ್ಲಿವೆ ಮತ್ತು ವೈರಿಯು ನಮ್ಮ ಜೀವಿತಗಳಲ್ಲಿ ಕೆಲಸಮಾಡುತ್ತಿದ್ದಾನೆ. ದೇವರು ಅವುಗಳೊಂದಿಗೆ ನಾವು ವ್ಯವಹರಿಸಬೇಕು ಎಂದು ಕೇಳುತ್ತಿದ್ದಾನೆ. ದೇವರು ''ನಿಮ್ಮ ಪರವಾಗಿ ನಾನು ಸೈತಾನನನ್ನು ಎದುರಿಸುತ್ತೇನೆ'' ಎಂದು ಹೇಳಲಿಲ್ಲ ಬದಲಾಗಿ ''ನೀನು ಸೈತಾನನನ್ನು ಎದುರಿಸು'' ಎಂದು ಹೇಳಿದ್ದಾನೆ.

**ಪ್ರಶ್ನೆ 3 : ನಾನು ತಲೆಮಾರಿನ ಬಂಧನಗಳನ್ನು ದೂರಪಡಿಸಿಕೊಳ್ಳುವವರೆಗೂ, ತಲೆಮಾರಿನ ಆಶೀರ್ವಾದಗಳಿಗೆ ಪ್ರಾರಂಭ ಮಾಡುವವನಾಗುವುದಿಲ್ಲವೋ?**

ಉತ್ತರ: ನೀವು ಕ್ರಿಸ್ತನ ಬಳಿ ಬಂದಾಗ ಸಹಜವಾಗಿಯೇ ಅಬ್ರಹಾಮನ ಆಶೀರ್ವಾದಗಳ ಬಾಧ್ಯತೆ ಹೊಂದುವಿರಿ ಮತ್ತು ಕ್ರಿಸ್ತನಲ್ಲಿ ನೀವೇನಾಗಿದ್ದೀರೋ ಅವರ ಆಶೀರ್ವಾದ ಹೊಂದುವಿರು. ಆದುದರಿಂದ ತಲೆಮಾರಿನ ಬಂಧನಗಳನ್ನು ವ್ಯವಹರಿಸದಿರುವುದರ ಮಧ್ಯದಲ್ಲೂ ನೀವು ಮತ್ತು ನಿಮ್ಮ ಕುಟುಂಬದವರು ತಲೆಮಾರಿನ ಆಶೀರ್ವಾದಗಳನ್ನು ಬಾಧ್ಯವಾಗಿ ಹೊಂದುವಿರಿ. ಹಾಗಿದ್ದರೂ ನಿಮ್ಮ ಪ್ರಸಕ್ತ ಸಂತತಿಯು ಇಂತಹ ಮಟ್ಟ ತಲುಪುವುದು, ನೀವು ದೇವರ ಮಾತುಗಳಿಗೆ ಯಾವ ಮಟ್ಟದಲ್ಲಿ ವಿಧೇಯರಾಗಿರುತ್ತೀರಿ ಅನ್ನುವುದರ ಮೇಲೆ ನಿಮ್ಮ ನಡೆ, ಜೀವನ ಹೇಗಿದೆ ಅನ್ನುವ ಅಂಶದ ಮೇಲೆ ಅಡಕವಾಗಿದೆ. ನೀವು ಸೋಮಾರಿಯಾಗಿದ್ದು ''ನಾನು ರಕ್ಷಿಸಲ್ಪಟ್ಟಿದ್ದೇನೆ ನಾನು ಅಗ್ನಿಯ ಭದ್ರತೆ ಮಾಡಿಕೊಂಡಿದ್ದೇನೆ, ಅದು ನನಗೆ ಸಾಕು. ನಾನು ಪರಲೋಕಕ್ಕೆ ಹೋಗುತ್ತೇನೆ ಮತ್ತು ಜೀವಿತದೊಂದಿಗೆ ತೇಲಾಡುತ್ತೇನೆ'' ಅಂದುಕೊಂಡರೆ ನಿಮ್ಮ ಪ್ರಸಕ್ತ ಸಂತತಿಯ ಮೇಲೆ ನೀವು ಆತ್ಮಿಕವಾದ ಪರಿಣಾಮ ಬೀರಲು ಸಾಧ್ಯವಾಗುವುದಿಲ್ಲ. ಆದರೆ ನೀವು ದೇವರಿಗೆ ಒತ್ತು ಕೊಡುವವರು ದೇವರ ವಿಷಯಗಳೊಳಗೆ ಇರುವವರು ಆಗಿದ್ದು ಆತನ ವಾಕ್ಯ, ಆತನ ಆತ್ಮದಲ್ಲಿ ಬೇರೂರಿದ್ದರೆ, ನಿಮ್ಮ ಪ್ರಸಕ್ತ ಸಂತತಿಯ ಮೇಲೆ ಶ್ರೇಷ್ಠ ಪರಿಣಾಮ ಬೀರಬಹುದು.

**ಪ್ರಶ್ನೆ 4 : ನಾನು ನನ್ನ ಕುಟುಂಬದ ಪರವಾಗಿ ನಿಂತು ದೇವರಲ್ಲಿ ಕ್ಷಮಾಪಣೆ ಕೇಳಬಹುದೋ ಅಥವಾ ನನ್ನ ಕುಟುಂಬದ ಪ್ರತಿಯೊಬ್ಬರು ಇದನ್ನು ವೈಯಕ್ತಿಕವಾಗಿ ಮಾಡಬೇಕೋ?**

ಉತ್ತರ : ದೇವರು ರಚಿಸಿದ 'ಅಧಿಕಾರ'ದ ಮೂಲಕ ಕಾರ್ಯ ಮಾಡುತ್ತಾನೆ. ಆ ''ಹಕ್ಕಿ'' ನಿಂದ ನಿಮ್ಮ ಕುಟುಂಬದ ಮೇಲೆ ಸ್ವಲ್ಪ ಮಟ್ಟಿಗೆ ಅವರ ಪರವಾಗಿ ನೀವು ಪರಿಣಾಮ ಬೀರಬಹುದು. ಆದರೆ ಪ್ರಸಕ್ತರ ನಡುವಿನ ನಿಮ್ಮ ಆತ್ಮಿಕ ತೀರ್ಮಾನಗಳ ಅನುಭವ ಅಗತ್ಯ ಅಂದರೆ ಅವರೆಲ್ಲರೂ ನಿಮ್ಮ ಪ್ರಭಾವಿತ ಕ್ಷೇತ್ರದಲ್ಲಿರಬೇಕು ಮತ್ತು ನಿಮ್ಮ ಬಳಿಕ ಬರುವವರ ಮೇಲೆ ಅದು ಹೆಚ್ಚು ಪರಿಣಾಮವುಂಟು ಮಾಡುವುದು. ನಿಮ್ಮ ಕುಟುಂಬದಲ್ಲಿ ನಿಮ್ಮ ವಯಸ್ಸಿನವರು, ಹೆಚ್ಚಿನ ವಯಸ್ಸಿನವರಿದ್ದರೆ, ಅವರು ತಮ್ಮ ಸ್ವಂತ ತೀರ್ಮಾನಗಳನ್ನು ಮಾಡಬೇಕು. ನಿಮ್ಮ ಪ್ರಾರ್ಥನೆಯ ಮೂಲಕ ಅವರನ್ನು ಪ್ರಭಾವಿಸಬಹುದು. ನಾವು, ನಮ್ಮ ಕುಟುಂಬ ವೃಕ್ಷದ ಪ್ರತಿನಿಧಿಗಳಾಗಿರುವುದರಿಂದ, ಎಲ್ಲಾ ಹರಕೆಗಳು, ಸಮರ್ಪಣೆಗಳು, ಒಪ್ಪಂದಗಳ ಮೇಲೆ ಅಧಿಕಾರವಿರುತ್ತದೆ. ಆದರೆ ಪೂರ್ವಿಕರು ಮಾಡಿದವುಗಳಲ್ಲಿ ನಾವೇನಾದರೂ ಬದಲಾವಣೆ ಮಾಡಿದರೆ, ನಮ್ಮ ಬಳಿಕ ಬರುವವರ ಮೇಲೆ ಪರಿಣಾಮ ಬೀರುತ್ತದೆ.

**ಪ್ರಶ್ನೆ 5 : ಸಂತತಿಯ ಬಂಧನಗಳಿಗೆ ನಡೆಸುವ ''ವಿಷಯಗಳ ಗ್ರಹಿಕೆ'' ''ಕಾರಣ''ಗಳನ್ನು ಹುಡುಕುವುದು, ''ದುಷ್ಟತನದ ಮೂಲ'' ಗಳನ್ನು ತಿಳಿಯುವುದು ಅವಶ್ಯಕವೇ?**

ಉತ್ತರ : ಜನರ ಸಾಕ್ಷಿಯ ಆಧಾರದ ಮೇಲೆ, ಇಂತಹ ಅನೇಕ ಪರಿಸ್ಥಿತಿಗಳಲ್ಲಿ, ನಮ್ಮ ಪೂರ್ವಿಕರ ಹರಕೆಗಳು, ಸಮರ್ಪಣೆಗಳು, ಒಪ್ಪಂದಗಳ ಮೂಲಕ ಸೈತಾನನು ಆಹ್ವಾನವನ್ನು ಹೊಂದಿಕೊಂಡವನಾಗಿ ಕುಟುಂಬಗಳನ್ನು ಬಂಧನದಲ್ಲಿಟ್ಟಿದ್ದರೆ, ಅಂತಹ ಹರಕೆಗಳನ್ನು ಮತ್ತು ಶಾಪಗಳನ್ನು ಪರಿತ್ಯಾಗ ಮಾಡಿದರೆ ಸಾಕು ಕುಟುಂಬ ಬಂಧನಗಳನ್ನು ಮುರಿಯಬಹುದು. ಆದರೆ ಕೆಲವು ತೀಕ್ಷ್ಣ ಸಂದರ್ಭಗಳಲ್ಲಿ, ಬಂಧನಗಳು, ಆಳವಾಗಿ, ಬಲಗೊಂಡು ಬೇರೂರಿ ಮುಂದುವರಿಯುತ್ತಾ ಕಾಣಿಸಿಕೊಳ್ಳುತ್ತವೆ. ಇಂತಹವುಗಳ ಮೂಲ ಗುರ್ತಿಸಬೇಕು. ಇವು ಹೇಗೆ ಬಂದವು. ನಮ್ಮ ವಂಶವೃಕ್ಷದಲ್ಲಿ ಯಾರಾದರೂ ವೈರಿಗೆ ಅಧಿಕಾರ ಕೊಟ್ಟು ಈ ರೀತಿ ಮುಂದುವರೆಯುತ್ತಾ, ಪೂರ್ವಿಕರು ಆಸ್ಪದ ನೀಡಿದ್ದರಾ ಎಂಬುದನ್ನು

ತಿಳಿದುಕೊಳ್ಳಬೇಕು. ಅನೇಕಾವರ್ತಿ ಪ್ರವಿತ್ರಾತ್ಮನು ನಮಗೆ ಉತ್ತರಗಳನ್ನು ಪ್ರಚುರ ಮಾಡುತ್ತಾನೆ. ಅಥವಾ ನಮ್ಮ ಕುಟುಂಬದ ಸಂಪೂರ್ಣ ಇತಿಹಾಸ ಬಲ್ಲವರಿಂದ ತಿಳಿಯಬಹುದು.

**ಪ್ರಶ್ನೆ 6 : ಕ್ರಿಸ್ತ ನಂಬಿಕೆಯುಳ್ಳವರ ಮೇಲೆ ಶಾಪಗಳು ಪರಿಣಾಮ ಬೀರುತ್ತವೆಯೇ?**

ಉತ್ತರ : ಸಾಮಾನ್ಯವಾಗಿ ಮಾತಾನಾಡುವುದಾದರೆ, ಇದರ ಉತ್ತರ ''ಇಲ್ಲ'' ''ಯಾಕೋಬ್ಯರಲ್ಲಿ ಶಕುನ ನೋಡುವದು ಇಲ್ಲ, ಇಸ್ರಾಯೇಲ್ಯರಲ್ಲಿ ಕಣಿ ಕೇಳುವದು ಇಲ್ಲ'' (ಅರಣ್ಯಕಾಂಡ 23:23) ಹೀಗಿದ್ದಾಗಲೂ, ಸೈತಾನನಿಗೆ ಅವಕಾಶ ಕಲ್ಪಿಸಿದರೆ, ಅವನು ಸುಲಭವಾಗಿ ಪ್ರವೇಶಿಸುತ್ತಾನೆ. ಉದಾಹರಣೆಗೆ ಒಬ್ಬ ವಿಶ್ವಾಸಿಯು ರಹಸ್ಯವಾದವುಗಳ ಜೊತೆ ಚೆಲ್ಲಾಟವಾಡಿದರೆ ಅವನು ಭಯದಲ್ಲಿ ನಡೆದರೆ ಅವರ ಜೀವಿತಗಳಿಗೆ ಸೈತಾನನಿಗೆ ಆಹ್ವಾನ ಕೊಡಲು ಮಾರ್ಗವಾಗುತ್ತದೆ. ಇದು ಆ ವ್ಯಕ್ತಿಯು ದೆವ್ವಗಳ ಕಾರ್ಯಗಳಿಗೆ ಅವಕಾಶವೀಯುವಂತಾಗುತ್ತದೆ. ಆದುದರಿಂದ ದೇವರೊಂದಿಗೆ ವಿಧೇಯತೆಯಲ್ಲಿ ನಡೆಯುವುದು ವಿಶ್ವಾಸಿಗಳಿಗೆ ಬಹಳ ಪ್ರಾಮುಖ್ಯ.

**ಪ್ರಶ್ನೆ 7 : ಯಾಕೆ ನಮ್ಮ ದೇವರು ಅಗೌರವ ಸಹಿಸದ ದೇವರು ?**

ಉತ್ತರ : ನೀವು ದೇವರ ವಾಕ್ಯ ಪರೀಕ್ಷಿಸಿದರೆ, ಎಲ್ಲಾ ಸಮಯದಲ್ಲೂ ನಾವು ಓದುವುದೇನೆಂದರೆ. ಅನ್ಯದೇವರುಗಳನ್ನು ಅಥವಾ ಮಿಥ್ಯದೇವತೆಗಳನ್ನು ಆರಾಧಿಸುವ, ಅಡ್ಡ ಬೀಳುವ ಸನ್ನಿವೇಶದಲ್ಲಿ ನಮ್ಮ ದೇವರು ತಾನು ''ಅಗೌರವ ಸಹಿಸದ ದೇವರು'' ಎಂದು ಅಭಿವ್ಯಕ್ತ ಪಡಿಸುತ್ತಾನೆ. ನಾವು ಯಾವಾಗ ಸುಳ್ಳು ದೇವರುಗಳನ್ನು ಆರಾಧಿಸುತ್ತೇವೋ ಆಗ ನಮ್ಮ ದೇವರು ಅಗೌರವ ಸಹಿಸದ ದೇವರು ಆಗಿರುತ್ತಾನೆ. ಯಾಕೆಂದರೆ,

- ''ಜೀವಿಸುವ ದೇವರನ್ನು ಆರಾಧಿಸಬೇಕೆಂಬ'' ನಮ್ಮ ಪ್ರಾಥಮಿಕ ಉದ್ದೇಶವನ್ನು ಭಂಗಪಡಿಸುತ್ತದೆ. ನಾವು, ಆತನನ್ನೇ ಆರಾಧಿಸಲು ಸೃಷ್ಟಿಸಲ್ಪಟ್ಟವರು, ಆತನೊಬ್ಬನನ್ನೇ ಆರಾಧಿಸಬೇಕು. ''ಸ್ವಗೌರವವನ್ನು ಕಾಪಾಡಿಕೊಳ್ಳುವವನು ಎಂಬ ಹೆಸರುಳ್ಳ ಯೆಹೋವನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದ್ದರಿಂದ ನೀವು ಬೇರೆ ಯಾವದೇವರ ಮುಂದೆ ಅಡ್ಡ ಬೀಳಬಾರದು'' (ವಿಮೋಚನಕಾಂಡ 34:14).

- ಆತನು, ಬೇರೆಯವರಿಗೆ, ತನ್ನ ಮಹಿಮೆ ಸಲ್ಲಗೊಡಿಸುವುದಿಲ್ಲ''ನಾನೇ ಯೆಹೋವನು, ಇದೇ ನನ್ನ ನಾಮವು, ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು, ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು''. (ಯೆಶಾಯ 42:8) ದೇವರಿಗೆ ಸಲ್ಲಬೇಕಾದ ಮಹಿಮೆಯನ್ನು ಬೇರೆ ಯಾವುದಕ್ಕಾದರೂ ಸಲ್ಲಿಸಿದರೆ ದೇವರು ಅದನ್ನು ಸಹಿಸುವುದಿಲ್ಲ.

- ನಾವು ದೇವರನ್ನು ತಪ್ಪಾಗಿ ನಿರೂಪಿಸುತ್ತೇವೆ. ಇದು ದೇವರ ಗುರ್ತಿಸುವಿಕೆಯನ್ನು ಬದಲಾಯಿಸುತ್ತದೆ ಅಂದರೆ ''ಆತನು ನಿಜವಾಗಿ ಸೃಷ್ಟಿಕರ್ತನು'' ಎಂಬುದರ ಬದಲಾಗಿ ಬೇರೆ ರೀತಿ ಸ್ಪಷ್ಟಪಡಿಸುವುದನ್ನು ಎತ್ತಿ ತೋರಿಸುತ್ತದೆ.

  ''ಹೀಗಿರಲು ನನ್ನನ್ನು ಯಾರಿಗೆ ಹೋಲಿಸಿ ಸರಿಸಮಾನ ಮಾಡುತ್ತೀರಿ ಎಂದು ಸದಮಲ ಸ್ವಾಮಿಯು ಕೇಳುತ್ತಾನೆ'' (ಯೆಶಾಯ 40:25). ಉದಾಹರಣೆಗೆ, ಯಾರಾದರೂ ನಿಮ್ಮ ಭಾವಚಿತ್ರ ತೆಗೆದುಕೊಂಡು ಕತ್ತನ್ನು ಕತ್ತರಿಸಿ ಅದಕ್ಕೆ ಜಿರಲೆ ತಲೆ ಅಂಟಿಸಿ, ಅದು ನೀವು ಅಂದರೆ ಹೇಗಿರುತ್ತದೆ? ನೀವು ಅದನ್ನು ಇಷ್ಟಪಡುತ್ತೀರಾ? ನಿಮಗೆ ಸಂತೋಷವಾಗುವುದಿಲ್ಲ ಆದರೆ ''ಅಗೌರವಕ್ಕೆ'' ಅಂದರೆ ಅವರು ಮಾಡಿದ್ದಕ್ಕೆ ನಿಮಗೆ ಕೋಪವುಂಟಾಗುತ್ತದೆ. ನಾವು ಆರಾಧಿಸುವಾಗ ''ಸೃಷ್ಠಿಕರ್ತನ'' ಬದಲು ಸೃಷ್ಠಿಯ ವಸ್ತುಗಳನ್ನು ಆರಾಧಿಸಿದರೆ, ಇದು ದೇವರನ್ನು ತಪ್ಪಾಗಿ ನಿರೂಪಿಸಿದಂತಾಗುತ್ತದೆ ಆದುದರಿಂದ ದೇವರು ಅಗೌರವ ಸಹಿಸುವವನಲ್ಲ.

**ಪ್ರಶ್ನೆ 8 : ''ಕ್ರಿಸ್ತೀಯ ವಿಗ್ರಹಗಳು'' ಸಹ ತಪ್ಪಾದವುಗಳೇ?**

ಉತ್ತರ : ಯಾವುದೇ ಬಗೆಯ (ವಿಗ್ರಹ) ಮೂರ್ತಿಗಳಾಗಲಿ ಅಥವಾ ಪ್ರತಿಮೆ, ಚಿತ್ರಗಳಾಗಲಿ, ಆರಾಧನೆಯ ಧ್ಯಾನದ, ಭಕ್ತಿಯ ವಿಷಯಗಳ ಸ್ಥಾನದಲ್ಲಿ ಇಡುವುದಾದರೆ, ಅದನ್ನು ಯಾವ ಹೆಸರಿನಿಂದ ಕರೆದರೂ, ಯಾರನ್ನು ಅದು ಪ್ರತಿಬಿಂಬಿಸಿದರೂ ಕ್ರಿಸ್ತೀಯ ಆರಾಧನೆಯಲ್ಲಿ ಇದ್ದರೂ, ಅದು ತಪ್ಪೇ.

ಬಾಲ ಯೇಸು, ನವಯುವಕಯೇಸು, ಮಧ್ಯವಯಸ್ಸಿನ ಯೇಸು ಮುಂತಾದ ಚಿತ್ರಪಟಗಳಿಗೆ ಮತ್ತು ವಿಗ್ರಹಗಳಿಗೆ ಮೇಣದ ದೀಪ ಹಚ್ಚುವುದು ಆರಾಧಿಸುವುದು ತಪ್ಪು. ಅದು ನಿಜವಾಗಿಯೂ ಯೇಸುವಿನ ಚಿತ್ರಪಟ ಎಂದು ನಿಮಗೆ ಹೇಗೆ ಗೊತ್ತು? ಬೇರೆಯವರ ಚಿತ್ರಕ್ಕೆ ಮೇಣದ ದೀಪದಿಂದ, ಹೂವುಗಳಿಂದ ಆರಾಧಿಸುತ್ತಿರಬಹುದು.

ದೇವರು ಹೇಳುತ್ತಾನೆ'' ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನೂ ಮಾಡಿಕೊಳ್ಳಬಾರದು.

ವಿಗ್ರಹಗಳನ್ನು ''ಕ್ರಿಸ್ತೀಯ'' ಎಂದು ಕರೆದು, ನೀವು ಇದರ ಮೂಲಕ ದೇವರನ್ನು ಆರಾಧಿಸುತ್ತಿದ್ದೀರಿ ಎಂದು ಹೇಳುವುದು ಹಾಸ್ಯಾಸ್ಪದ. ನೀವು ದೇವರನ್ನೇ ಆರಾಧಿಸಿರಿ ''ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ'' ಆರಾಧಿಸಿರಿ (ಯೋಹಾನ 4:23,24).

**ಪ್ರಶ್ನೆ 9 : ಮೇಣದ ಬತ್ತಿ ಹಚ್ಚುವುದರಲ್ಲಿ ತಪ್ಪೇನಿದೆ?**

ಉತ್ತರ : ಮೇಣದ ಬತ್ತಿ ಹಚ್ಚುವುದರಲ್ಲಿ ತಪ್ಪಿಲ್ಲ. ಇದು ಒಂದು ಸೂಚನೆ ಅಥವಾ ಸಂಕೇತ. ಇದನ್ನು ಅನೇಕ ಕಾರಣಗಳಿಗೆ ಮಾಡುತ್ತೇವೆ. ವಿದ್ಯುಚ್ಛಕ್ತಿ ಇಲ್ಲದಿರುವಾಗ, ಜನನ ದಿನ ಆಚರಣೆ, ಮದುವೆಗಳಲ್ಲಿ ಏಕತೆ ಸೂಚನೆಯ ಸಂಕೇತವಾಗಿ, ಒಂದು ಉತ್ತಮ ಸ್ಥಳದ ವಾತಾವರಣಕ್ಕಾಗಿ ಹಚ್ಚುವುದು ಸಹಜ. ಆದರೆ ಇದು ಆರಾಧನೆಯ ಕಾರ್ಯವಾಗಿ ವಿಗ್ರಹಗಳ ಮುಂದೆ ಅಥವಾ ಚಿತ್ರಪಟಗಳ ಮುಂದೆ ಮಾಡಿದರೆ ''ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ'' ತಕ್ಕ ಹಾಗೆ ಆರಾಧಿಸುವುದಕ್ಕೆ ಅಪವಿತ್ರ ಮಾಡಿದಂತಾಗುತ್ತದೆ. (ಯೋಹಾನ 4:23,24). ಚಿತ್ರಪಟದ ಮುಂದೆ ಮೇಣದ ದೀಪ ಹಚ್ಚಿದರೆ ದೇವರು ಒಳ್ಳೆಯದೆಂದು ತಿಳಿಯುತ್ತಾನೆ ಎಂದು ಭಾವಿಸಿದ್ದೀರೋ ಅಥವಾ ಬೆಂಕಿಯ ಜ್ವಾಲೆಗಳು ನಮ್ಮ ಪ್ರಾರ್ಥನೆಗಳನ್ನು ಪರಲೋಕಕ್ಕೆ ಕೊಂಡ್ಯೊಯ್ದು ದೇವರು ಉತ್ತರಿಸುತ್ತಾನೆಂದು ನಂಬಿದ್ದಿರೋ, ಹಾಗಿದ್ದರೆ ನೀವು ನಿಮ್ಮನ್ನೇ ಹಸುಗೂಸುಗಳಾಗಿ ಮಾಡಿಕೊಂಡಂತೆ ಅಥವಾ ಮೋಸಪಡಿಸಿಕೊಂಡಂತೆ. ಸತ್ಯವೇದವು ದೇವರನ್ನು ''ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ'' ತಕ್ಕ ಹಾಗೆ ಆರಾಧಿಸಬೇಕು ಎಂದು ಹೇಳುತ್ತದೆ. ಮೇಣ ಮತ್ತು ಬೆಂಕಿಯಿಂದಲ್ಲಾ.

**ಪ್ರಶ್ನೆ 10 : ನನ್ನ ಮನೆ ಸಂಗಾತಿ /ಹೆಂಡತಿ ವಿಗ್ರಹಗಳನ್ನಿಟ್ಟುಕೊಂಡಿದ್ದಾರೆ, ಇದು ನನಗೆ ಕೇಡು ಮಾಡುತ್ತದೆಯೇ?**

ಉತ್ತರ : ಇಲ್ಲ, ನಾವು ದುಷ್ಟನ ಆಡಳಿತದಲ್ಲಿರುವ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. (1 ಯೋಹಾನ 5:18,19) ಎಂದು ಬೈಬಲ್ ಹೇಳುತ್ತದೆ. ನಾವು ಎಲ್ಲಿ ಹೋದರೂ ದೆವ್ವಗಳ ಚಲನ ವಲನಗಳಿರುತ್ತದೆ. ವಿಗ್ರಹ ಇಟ್ಟುಕೊಂಡಿರುವ

ನಿನ್ನ ಮನೆ ಸಂಗಾತಿ/ಹೆಂಡತಿಯಿಂದ ಯಾವ ಕೇಡೂ ನಿನಗಾಗುವುದಿಲ್ಲ. ನೀನು ಭಯಪಡುವ ಅವಶ್ಯಕತೆಯಿಲ್ಲ. ನಿನ್ನನ್ನು ಶುದ್ಧೀಕರಿಸಿಕೋ, ನಿನ್ನ ಜಾಗವನ್ನು ಮನೆಯನ್ನು ದೇವರ ವಾಕ್ಯದಿಂದ ಸ್ವಚ್ಛವಾಗಿಟ್ಟುಕೋ. ನೀನು ಚೆನ್ನಾಗಿರುತ್ತಿ. ದೇವರಿಂದ ಹುಟ್ಟಿದವನನ್ನು ಕೆಡುಕನು ಮುಟ್ಟಲು ಆಗುವುದಿಲ್ಲಾ ಭಯದಿಂದ ಅಥವಾ ಮೂರ್ತಿಯ ಆರಾಧನೆಯಿಂದ ದುರಾತ್ಮನಿಗೆ ಆಹ್ವಾನ ಕೊಡಬೇಡ. ನಿನ್ನಲ್ಲಿ ಜೀವಿಸುವ ಹೆಚ್ಚಿನವನಾದ ಸೃಷ್ಟಿಕರ್ತನನ್ನು ಸ್ಮರಿಸಿಕೋ. (1ಯೋಹಾನ 4:4).

## ಪ್ರಶ್ನೆ 11: ದೇವರು ತಲೆಮಾರಿನ ಬಂಧನಗಳನ್ನು ಉಂಟುಮಾಡುತ್ತಾನೊ, ಅಥವಾ ಸೈತಾನನು ಮಾಡುತ್ತಾನೊ?

ಉತ್ತರ : ಪೂರ್ವಿಕರು ಮಾಡಿದ ಪಾಪಗಳು, ಹರಕೆಗಳು, ಸಮರ್ಪಣೆಗಳು ಸೈತಾನನ ಕೆಲಸಗಳಿಗೆ ಅವಕಾಶ ನೀಡಿ, ಬಂಧನಗಳುಂಟಾದವು ಎಂಬುದನ್ನು ಅರ್ಥಮಾಡಿ ಕೊಳ್ಳಬೇಕು. ಸತ್ಯವೇದದ ಕೆಲವು ವಚನ ಭಾಗಗಳಲ್ಲಿ ದೇವರು ಹೇಳುವುದೇನೆಂದರೆ ಅವನು ''ಮಾಡುತ್ತಾನೆ'' ಅಥವಾ ''ರೋಗಗಳನ್ನು ಕಳುಹಿಸುತ್ತಾನೆ, ಮೂಗರನ್ನಾಗೂ, ಮತ್ತು ಕಿವುಡರನ್ನಾಗೂ ಮಾಡಲು, ದುರಾತ್ಮನನ್ನು ಕಳುಹಿಸುತ್ತಾನೆ'' ಇವೆಲ್ಲವೂ ಸೈತಾನನು ಮಾಡುವವುಗಳು. ವಿವರಣೆಯೇನೆಂದರೆ, ದೇವರವಾಕ್ಯದ ವಿವರಣೆಯಂತೆ ದೇವರು ಇದನ್ನು ''ಮಾಡುವುದಿಲ್ಲ'' ಬದಲಾಗಿ ಇದನ್ನು ಸೈತಾನನು ಮಾಡುವವನಾಗಿದ್ದಾನೆ. ದೇವರು ತನ್ನ ಅನುಗ್ರಹದಿಂದ ಪ್ರತಿಯೊಬ್ಬನನ್ನು ಸಂರಕ್ಷಿಸುತ್ತಾನೆ. ಯೇಸು ಹೇಳುವುದೇನೆಂದರೆ ದೇವರು ಆತನ ಸೂರ್ಯನನ್ನು ಒಳ್ಳೆಯವರ, ಕೆಟ್ಟವರ ಮೇಲೆ ಪ್ರಕಾಶಿಸುವಂತೆ ಮಾಡುತ್ತಾನೆ. ಒಳ್ಳೆಯವರ ಕೆಟ್ಟವರ ಮೇಲೆ ಮಳೆ ಕಳುಹಿಸುತ್ತಾನೆ. ಯಾವಾಗ ಒಬ್ಬ ವ್ಯಕ್ತಿ ದೇವರ ಕಟ್ಟಳೆ ಮತ್ತು ಚಿತ್ತವನ್ನು ಸ್ವೇಚ್ಛೆಯಿಂದ ಉಲ್ಲಂಘಿಸುತ್ತಾನೋ ಆಗ ಅವನು ಸ್ವಚಿತ್ತದಂತೆ, ಸೈತಾನನು ಉಂಟುಮಾಡುವ ಬಾಧೆಗಳಿಗೆ, ಭಗ್ನಗಳಿಗೆ, ನಾಶನಕ್ಕೆ ಸಿಲುಕಿಕೊಳ್ಳುತ್ತಾನೆ. ಇಂತಹ ವಿಷಯಗಳಿಗೆ ದೇವರನ್ನು ನೀನು ದೂಷಿಸಲೇ ಬಾರದು. ಇಂತಹ ವ್ಯಕ್ತಿಯಿಂದ ದುಷ್ಕಕಾರ್ಯದ ಫಲವು, ಅವನನ್ನು ದೇವರು ಕೊಡುವ ಅನುಗ್ರಹದಿಂದ ದೂರಮಾಡಿ, ಸೈತಾನನ ಪ್ರಭಾವಗಳು, ದಬ್ಬಾಳಿಕೆ ಪ್ರಭುತ್ವದಿಂದ ಆವೃತವಾಗುವಂತೆ ಮಾಡುತ್ತದೆ. ದೇವರು, ಜನರಿಗೆ ಸ್ವಂತ ತೀರ್ಮಾನಗಳನ್ನು ಮತ್ತು ಅವರ ಸ್ವಮಾರ್ಗದಲ್ಲಿ ನಡೆಯಲು ಬಿಡುತ್ತಾನೆ. ಸಾಮಾನ್ಯವಾಗಿ ಜನರು ಆರಿಸಿಕೊಳ್ಳುವ ಮಾರ್ಗವು, ಸೈತಾನನು ಅವರನ್ನು ಹಿಡಿದು ಇಟ್ಟುಕೊಳ್ಳುವ ಬಂಧನಕ್ಕೆ ಕೊಂಡೊಯ್ಯುತ್ತದೆ.

ದೇವರು ತನ್ನ ಗುರುತನ್ನು ಪ್ರಕಟಪಡಿಸಿದ್ದಾನೆ. ''ಯೆಹೋವನೆಂಬ ನಾನೇ ನಿಮ್ಮ ಆರೋಗ್ಯದಾಯಕನು''. ಇಲ್ಲಿ ಆತನು ಹೇಳಿದ ಮಾತನ್ನು ಆಧುನಿಕ ಪದಪ್ರಯೋಗಶಾಸ್ತ್ರಕ್ಕೆ ಅಳವಡಿಸಿದರೆ ಯೆಹೋವನೆಂಬ ಆತನೇ ನಮ್ಮ ವೈದ್ಯನು.

ನೀವು ಅನಾರೋಗ್ಯದಲ್ಲಿದ್ದಾಗ ವೈದ್ಯರ ಬಳಿ ಹೋಗಿ, ''ವೈದ್ಯರೇ! ಈ ದಿನದಲ್ಲಿ ನಿಮ್ಮ ಮಹಾ ಪವಿತ್ರ ಚಿತ್ತವಿದ್ದರೆ ಜನರನ್ನು ಗುಣಮಾಡುವ ಹಂಗಿನಲ್ಲಿದ್ದರೆ, ನಿಮ್ಮ ಒಳ್ಳೆಯ ಇಚ್ಛೆಯಿಂದ, ನನ್ನಲ್ಲಿರುವ ಅನಾರೊಗ್ಯ ಗುರ್ತಿಸಿ, ಉತ್ತಮ ಸ್ಥಿತಿಗೆ ತಲುಪುವಂತೆ ಏನಾದರೂ ಮಾಡಿರಿ'' ಎಂದು ಹೇಳುತ್ತಿರೋ? ನಾವು ವೈದ್ಯರ ಬಳಿಗೆ ಆತನು ತನಗಿರುವ ಜ್ಞಾನ, ಯೋಗ್ಯತೆಯಿಂದ ಕೆಟ್ಟದ್ದಾಗಿರುವ ಎಲ್ಲವನ್ನೂ ಸರಿಪಡಿಸಲಿ ಎಂಬ ಬಯಕೆಯಿಂದ ಹೋಗುತ್ತೇವೆ. ಆದರೆ ದೇವರ ಸಂಬಂಧದೊಂದಿಗೆ ನಮಗೆ ಎರಡು ಮಟ್ಟಗಳಿರುತ್ತವೆ. ''ಕರ್ತನು ಹೇಳಿದ್ದಾನೆ. ನಾನು ''ಯೆಹೋವ ರಾಫಾ'' (ನಿಮ್ಮನ್ನು ಗುಣಪಡಿಸುವವನು. ನಿಮ್ಮ ವೈದ್ಯನು). ಯೆಹೋವಯಿರೆ (ಒದಗಿಸುವಾತನು) ಯೆಹೋವ ನಿಸ್ಸೀ (ಜಯಕೊಡುವಾತನು) ನಿಮ್ಮನ್ನು ಕಾಯುವವನು, ನಿಮ್ಮ ನೀತಿ (ಸದ್ಗುಣನು). ''ನಿನ್ನ ಮಹಾ ಪವಿತ್ರ ಚಿತ್ತದಂತೆ ನನ್ನನ್ನು ಗುಣಪಡಿಸು'' ಎಂಬುದಾಗಿ ಹೇಳುವುದಿಲ್ಲ. ''ಗುಣಪಡಿಸುವುದು ಆಶೀರ್ವದಿಸುವುದು,'' ದೇವರ ಚಿತ್ತವೇ ಆಗಿದೆ. ಮೇಲಿನಂತೆ ವೈದ್ಯರೊಂದಿಗೆ ನಾವು ಮಾತನಾಡಲು ಆಗದಿದ್ದರೆ, ಯಾಕೆ ನಾವು ದೇವರ ಬಳಿ ಆ ರೀತಿ ಮಾತನಾಡುತ್ತೇವೆ? ಮತ್ತೊಂದು ಸಾಮಾನ್ಯ ಉದಾಹರಣೆಯೆಂದರೆ, ದೇವರು ಎಲ್ಲಾ ಜನರನ್ನು ಸ್ವರ್ಗಕ್ಕೆ ಆಹ್ವಾನಿಸುತ್ತಾನೆ. ನರಕಕ್ಕಲ್ಲ. ಆದಾಗ್ಯೂ ಜನರು ಸ್ವರ್ಗದ ಬದಲು ನರಕವನ್ನು ಆರಿಸಿಕೊಳ್ಳುತ್ತಾರೆ. ದೇವರು ಅವರನ್ನು ನರಕಕ್ಕೆ ಕಳುಹಿಸುವುದಿಲ್ಲ. ಇದಕ್ಕೆ ಆತನು ದೂಷಿಸಲ್ಪಡಬಾರದು. ಆದುದರಿಂದ, ದೇವರು ತಲೆಮಾರಿನ ಬಂಧನಗಳನ್ನು ತರುವುದಿಲ್ಲ. ಬದಲಾಗಿ ಇದು ನಮ್ಮ ಪಾಪಮಯ ಕೃತ್ಯಗಳಿಂದ ಉಂಟಾದ ಸೈತಾನನ ಕೆಲಸವಾಗಿದೆ.

# ಪೂರ್ವ ಸಿದ್ಧತೆ

- ಆರಾಧನೆಗೆ ಉಪಯೋಗಿಸಲ್ಪಟ್ಟ ಮತ್ತು ಉಪಯೋಗಿಸುತ್ತಿರುವ ಪದಾರ್ಥಗಳನ್ನು ತೆಗೆದು, ಹೊರಗೆ ಹಾಕಿರಿ. ಸಂಶಯಬಂದಾಗ ಅವುಗಳನ್ನು ಹೊರಹಾಕಿರಿ.
- ರಹಸ್ಯವಾದವುಗಳಲ್ಲಿ ತೊಡಗಿಸಿಕೊಳ್ಳುವುದನ್ನು ತ್ಯಜಿಸಿರಿ. ಕೃತಕ ನಿದ್ರೆ, ಮಾಟಮಂತ್ರ, ಜ್ಯೋತಿಶ್ಯಾಸ್ತ್ರ, ಜಾತಕ, ಮನಸ್ಸನ್ನು ಓದುವುದು, ಭವಿಷ್ಯವನ್ನು ತಿಳಿಸುವ ಸಂಖ್ಯಾಶಾಸ್ತ್ರ, ಅಂಗೈ ನೋಡಿ ಹೇಳುವುದು, ತಾಯಿತ, ಆಕರ್ಷಣೆ ಆಭರಣ, ಜನನ ಕಲ್ಲುಗಳು, ಅದೃಷ್ಟಶಾಲಿ ಸಂಕೇತಗಳು, ರಕ್ಷಾಮಣಿ ಮತ್ತು ಭಾರಲೋಕ ರಾಕ್ ಸಂಗೀತ - ಮುಂತಾದವುಗಳು ಅದೈವಿಕ ಭಕ್ತಿಯನ್ನು ಉತ್ತೇಜಿಸುತ್ತವೆ. ಇವನ್ನು ತೊರೆದುಬಿಡಿರಿ.
- ಸುಳ್ಳು (ಮಿಥ್ಯ) ಧಾರ್ಮಿಕತೆಗಳಿಗೆ ತೊಡಗಿಸಿಕೊಳ್ಳುವುದನ್ನು ತ್ಯಜಿಸಿರಿ (ಯೆಹೋವನ ಸಾಕ್ಷಿಗಳು, ನಿರಾತಂಕ ಕಟ್ಟಣೆ), ಮಿಥ್ಯ ಧರ್ಮಬೋಧನೆಗಳು, ಸುಳ್ಳು ದೇವರುಗಳ ಆರಾಧನೆ, ತತ್ವಶಾಸ್ತ್ರಗಳು, ಇವು ದೇವರ ವಾಕ್ಯಗಳಿಗೆ ವಿರೋಧಾತ್ಮಕ. ಇವನ್ನು ತ್ಯಜಿಸಿರಿ.
- ಕರ್ತನಾದ ಯೇಸುವು, ಶಿಲುಬೆಯ ಮೇಲೆ ಈಡೇರಿಸಿದ್ದನ್ನು ನಂಬುವುದು. ಮತ್ತು ನಿಮ್ಮ ಪೂರ್ವಿಕರು ಯಾವ ಸ್ವಾಮಿಭಕ್ತಿಗೆ (ವಿಧೇಯತೆಗೆ) ನಿಷ್ಠರಾಗಿದ್ದರೂ ನೀವು ಕ್ರಿಸ್ತನಲ್ಲಿ, ನಿಮ್ಮ ಸ್ವಾಮಿ ನಿಷ್ಠೆಯ ಪ್ರತಿಜ್ಞೆ ಮಾಡಿರಿ.
- ಸಂಪೂರ್ಣವಾಗಿ ದೇವರ ವಿಧೇಯತೆಗೆ ಒಪ್ಪಿಸಿಕೊಡಿರಿ.
- ದೇವರಿಗೆ ನಿಮ್ಮ ದಶಮಭಾಗಗಳನ್ನು ಕಾಣಿಕೆಗಳನ್ನು ಕೊಡಿರಿ. ನೀವು ಆಶೀರ್ವದಿಸಲ್ಪಡಬೇಕಾದರೆ ಆತನ ವಾಕ್ಯಕ್ಕೆ ವಿಧೇಯರಾಗಿರಿ. ಪರಿಶುದ್ಧರಾಗಿ ಜೀವಿಸಿರಿ.
- ನೀವು ಮತ್ತು ನಿಮ್ಮ ಪೂರ್ವಿಕರು, ಒಳಗಾಗಿರುವ ಬಂಧನಗಳನ್ನು ತೋರಿಸಿಕೊಡುವಂತೆ ಪವಿತ್ರಾತ್ಮ ದೇವರನ್ನು ಕೇಳಿರಿ. ಅವುಗಳ ಪಟ್ಟಿ ಮಾಡಿರಿ, ಅವುಗಳಿಗಾಗಿ ಪ್ರಾರ್ಥಿಸಿರಿ. ಎಲ್ಲಾ ಬಂಧನಗಳನ್ನು ಮುರಿಯಲು ಸ್ವತಂತ್ರಗೊಳ್ಳಲು ಮುಂದೆ ಹೇಳುವ ಪ್ರಾರ್ಥನೆ ಮಾಡಿರಿ.

# ಪ್ರಾರ್ಥನೆ

*ಕರ್ತನಾದ ಯೇಸುವೇ, ನೀನು ನನಗೋಸ್ಕರ ಶಿಲುಬೆಯ ಮೇಲೆ ಪ್ರಾಣ ಕೊಟ್ಟಿ ಎಂದು ನಂಬುತ್ತೇನೆ. ಸೈತಾನ ಎಲ್ಲಾ ಕ್ರಿಯೆಗಳಿಂದ ನನ್ನನ್ನು ಸ್ವತಂತ್ರಗೊಳಿಸಲು, ನೀನು ಶಿಲುಬೆಯ ಮೇಲೆ ರಕ್ತ ಸುರಿಸಿದಿ. ನಿನ್ನ ರಕ್ತವು ಪೂರ್ವಿಕರ ದುಷ್ಕೃಕಾರ್ಯಗಳಿಂದ ಉಂಟಾದ ವ್ಯರ್ಥ, ಮತ್ತು ಅಪ್ರಯೋಜಕ ಜೀವನ ಕ್ರಮದ ಮತ್ತು ಕಾರ್ಯದ ಪರಿಣಾಮಗಳು ನನ್ನ ಮೇಲೆ ಬಂದಾಗ, ನಿನ್ನ ರಕ್ತದಿಂದ ನನ್ನನ್ನು ಸ್ವತಂತ್ರಗೊಳಿಸಿದಿ. ಈ ದಿನ, ನೀನು ಮಾಡಿದ ಕಾರ್ಯದಿಂದಲೇ ನಾನು ಸ್ವತಂತ್ರಗೊಂಡೆನು ಎಂದು ಹೇಳುತ್ತೇನೆ.*

*ನನ್ನ ಜೀವಿತದ ಎಲ್ಲಾ ಪಾಪಗಳಿಗೂ, ದ್ರೋಹಗಳಿಗೂ ಪಶ್ಚಾತ್ತಾಪ ಪಡುತ್ತೇನೆ ಅವುಗಳನ್ನು ತಿರಸ್ಕರಿಸುತ್ತೇನೆ. ನನ್ನ ಪಾಪ, ದ್ರೋಹಗಳ ಕಾರ್ಯದ ಫಲಗಳಿಂದ, ನಾನು ಸ್ವತಂತ್ರವನ್ನು ಸ್ವೀಕರಿಸುತ್ತೇನೆ*

*ನನ್ನ ಪೂರ್ವಿಕರ ಮತ್ತು ಪಿತೃಗಳ ಎಲ್ಲಾ ರೀತಿಯ ಪಾಪ, ದ್ರೋಹಗಳಿಗೆ, ನಾನು ಪಶ್ಚಾತ್ತಾಪಪಟ್ಟು, ಬಿಟ್ಟುಬಿಡುತ್ತೇನೆ, ಅವರು ಪಾಪ, ದ್ರೋಹಗಳ ಕಾರ್ಯದ ಫಲಗಳಿಂದ ನಾನು ಸ್ವತಂತ್ರ ಹೊಂದಿಕೊಳ್ಳುತ್ತೇನೆ.*

*ಯೇಸುಕ್ರಿಸ್ತನ ಹೆಸರಿನಲ್ಲಿ ಮತ್ತು ಆತನ ರಕ್ತದ ಬಲದಿಂದ, ನಮ್ಮ ಪೂರ್ವಿಕರಿಂದ, ನಮ್ಮ ಜೀವಿತಗಳ ಮೇಲೆ ಬಂದಂತಹ ಎಲ್ಲಾ ಬಗೆಯ ಬಂಧನಗಳ ಮೇಲೆ ಅಧಿಕಾರ ತೆಗೆದುಕೊಳ್ಳುತ್ತೇನೆ, ಎಲ್ಲಾ ಬಂಧನಗಳನ್ನು ಯೇಸುವಿನ ನಾಮದಲ್ಲಿ ಮುರಿಯುತ್ತೇನೆ. ಎಲ್ಲಾ ಶಾಪಗಳನ್ನು ಅವುಗಳ ಪರಿಣಾಮಗಳನ್ನು ತೊಡೆದುಹಾಕುತ್ತೇನೆ.*

*ಎಲ್ಲಾ ಹರಕೆಗಳನ್ನು ಶಾಪಗಳನ್ನು ಸಮರ್ಪಣೆಗಳನ್ನು, ಪಾಪಮಯ ಕೃತ್ಯಗಳನ್ನು ಗಾಯಗಳನ್ನು, ಒಪ್ಪಂದಗಳನ್ನು, ನನ್ನ ತಂದೆಯ ವೃಕ್ಷದಿಂದ ಅಥವಾ ತಾಯಿಯ ಮೂಲದಿಂದ, ಬೇರೆಯವರಿಂದ ಬಂದ ಎಲ್ಲಾ ಶಾಪಗಳನ್ನು ಮತ್ತು ಸ್ವಕಾರ್ಯದ ಶಾಪಗಳು, ಸ್ವಾಮಿಭಕ್ತಿ ಶಪಥಗಳ ಮೂಲಕ ಸೈತಾನನಿಗೆ ಆಹ್ವಾನ ಕೊಟ್ಟಿದ್ದರೆ ಅವುಗಳನ್ನು ತೊಡೆದುಹಾಕುತ್ತೇನೆ.*

*ಯೇಸುವಿನ ನಾಮದಲ್ಲಿಯೂ ಕ್ರಿಸ್ತನ ರಕ್ತದ ಬಲದಿಂದಲೂ ನನ್ನ ಜೀವಿತವನ್ನು ತೊಂದರೆಪಡಿಸಿದ ವೈರಿಯ ಪ್ರಭಾವಿತ ಬಲವನ್ನು ನಾನು ಮುರಿದುಹಾಕುತ್ತೇನೆ. ನಾನು ಸ್ವತಂತ್ರನಾಗಿದ್ದೇನೆ, ಯೇಸು ನನ್ನನ್ನು ಸ್ವತಂತ್ರಗೊಳಿಸಿದ್ದಾನೆ.*

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಜನರು ಎದುರಿಸುತ್ತಿರುವ ಅನೇಕ ತೊಂದರೆಗಳು, ಅವರ ಹಿಂದಿನ ತಲೆಮಾರಿನ ಮೂಲವನ್ನು ಹೊಂದಿವೆ, ಯಾಕೆಂದರೆ ಅವರಲ್ಲಿ ಕೆಲವರು ಪಾಪಮಯ ಜೀವನಶೈಲಿ ನೆಡೆಸಿರಬಹುದು. ಅಥವಾ ದೆವ್ವಗಳ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿರಬಹುದು. ತಲೆಮಾರಿನ ಬಂಧನಗಳೆಂದರೇನು, ಅವುಗಳನ್ನು ಮುರಿಯುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತಿ ಪ್ರಾಮುಖ್ಯ. ನಮ್ಮ ಸ್ವಾತಂತ್ರ್ಯವು ಶಿಲುಬೆಯ ಮೇಲೆ ಧಕ್ಕಿದೆ. ಯೇಸುವು ನಮ್ಮ ಜೀವಿತಗಳಿಗೆ ನಾವು ನಿರ್ಲಕ್ಷದಿಂದ ಆಹ್ವಾನಿಸಿದ ಎಲ್ಲಾ ಸೈತಾನನ ಕೆಲಸಗಳನ್ನು ಲಯಮಾಡಲು ಬಂದನು.

ಈ ಪುಸ್ತಕವು. ತಲೆಮಾರಿನ ಹಾಗೂ ವೈಯಕ್ತಿಕ ಬಂಧನಗಳನ್ನು ಗುರ್ತಿಸುವುದು ಹೇಗೆ ಮತ್ತು ಅವುಗಳನ್ನು ಮುರಿಯುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸ್ವತಂತ್ರವಾಗಿರಿ! ಯೇಸುವು ನಮಗೆ ಕೊಡಲು ಬಂದ ಸಮೃದ್ಧಿಕರ ಜೀವಿತವನ್ನು ಪಡೆದು ಜೀವಿಸಿರಿ!

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org